ನಿಮ್ಮೂರು ಸುದ್ದಿ

ಕನ್ನಡ ದಿನ ಪತ್ರಿಕೆ NIMMURU SUDDI

ಸಂಪಾದಕರು: ಸುಂದರ್ Editor : Sundar

ಏಕ ಕಾಲಕ್ಕೆ
ಬಳ್ಳಾರಿ,
ಕೊಪ್ಪಳ,
ಯಾದಗಿರಿ,
ರಾಯಚೂರು,
ಕಲಬುರ್ಗಿ,
ಬೀದರ,
ವಿಜಯನಗರ
ಜಿಲ್ಲೆಗಳಲ್ಲಿ ಪ್ರಕಟ

Volume: 01, Issue: 244 RNI Number : KNKAN/25/A2770 16-09-2026 Wednesday Page 04, Price 2/- suddinimmuru@gmail.com Mob:-8660146563

ಸಂಪುಟ :01 ಸಂಚಿಕೆ :244 ರಾಯಚೂರು 16-09-2026 ಬುಧವಾರ ಪುಟ 04 ಬೆಲೆ ರೂ.2/- ಮೊ:8660146563

ದಲಿತರ ಅತ್ಯಾಚಾರ ಕೊಲೆ ಪ್ರಕರಣ ಸಿಐಡಿ ತನಿಖೆಗೆ ಒಳಪಡಿಸಿ

ಹೋರಾಟಗಾರ ಎಂ.ಆರ್ ಬೇರಿಗೆ ಜೀವಬೆದರಿಕೆ; 17ರಂದು ಅನಿರ್ದಿಷ್ಟಾವಧಿ ಧರಣಿಗೆ ತೀರ್ಮಾನ

ನವಸ್ಫೂರ್ತಿ ಸುದ್ದಿ

ರಾಯಚೂರು,ಸೆ.15-

ದಲಿತ ಯುವತಿ ಅಶ್ವಿನಿ ಹಾಗೂ ರಾಣೆಮ್ಮ ಅವರ ಮೇಲೆ ಅತ್ಯಾಚಾರ ಕೊಲೆ ಪ್ರಕರಣ ಹಾಗೂ ಭೂಮಾನಂದನ ಕೊಲೆ ಪ್ರಕರಣವನ್ನು ಜಿಲ್ಲಾ ಪೊಲೀಸ್ ಹಾಗೂ ನಾಗರಿಕರ ಹಕ್ಕುಗಳ ಜಾರಿ ನಿರ್ದೇಶನಾಲಯ (ಡಿಸಿಆರ್ ಇ) ತನಿಖೆ ನಡೆಸಲು ವಿಫಲವಾಗಿದ್ದು, ಕೂಡಲೇ ಸಿಐಡಿ ತನಿಖೆಗೆ ವಹಿಸಬೇಕು ಹಾಗೂ ಭೂಮಾನಂದ ಕೊಲೆ ಪ್ರಕರಣದ ಹೋರಾಟ ಮಾಡುತ್ತಿರುವ ಎಂ. ಆರ್ ಬೇರಿ ಸೇರಿದಂತೆ ಹಲವರಿಗೆ ಜೀವ ಬೆದರಿಕೆ ಹಾಕುತ್ತಿದ್ದಾರೆ ಬೆದರಿಕೆಯ ಹಿಂದೆ ಎಸ್ ಟಿ ಶಾಸಕ ಬಸನಗೌಡ ದದ್ದಲ್ ಹಾಗೂ ಮಾಜಿ ಸಚಿವ ಶಿವನಗೌಡ ನಾಯಕ ಅವರ



ಕೈವಾಡವಿದೆ ಎಂದು ದಲಿತಪರ ಹೋರಾಟಗಾರ ಎಸ್ ಮಾರೆಪ್ಪ ಗಂಭೀರ ಆರೋಪ ಮಾಡಿದರು.

ಅವರು ಮಂಗಳವಾರ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಯಚೂರು, ಕೊಪ್ಪಳ, ಯಾದಗಿರಿ ಸೇರಿ ರಾಜ್ಯದ ಹಲವೆಡೆ ದಲಿತರ ಮೇಲೆ ಹಲ್ಲೆ,ಕೊಲೆ, ಅತ್ಯಾಚಾರ ಗಳು ನಡೆಯುತ್ತಿದೆ. ದಲಿತರಿಗೆ ರಕ್ಷಣೆ ಇಲ್ಲದಂತಾಗಿದೆ. ಸಿರವಾರ ತಾಲೂಕಿನ ಕಡದಿನ್ನಿ ಗ್ರಾಮದಲ್ಲಿ ನಾಯಕ ಸಮಾಜದ ಮುಖಂಡರು ಮಾದಿಗ ಸಮಾಜದವರಿಗೆ ದೇವಸ್ಥಾನ ಪ್ರವೇಶ ನೀಡದೇ ಅವಮಾನ ಮಾಡಿದ ಬಗ್ಗೆ ದೂರು ನೀಡಿದರೆ ನಾಯಕ ಸಮುದಾಯದವರು ಪ್ರತಿದೂರು ನೀಡಿದ್ದಾರೆ. ಅಷ್ಟೇ ಅಲ್ಲದೇ ಎಂ ಆರ್ ಬೇರಿಯವರಿಗೆ ಬೆದರಿಕೆ ಹಾಕಿದ್ದಾರೆ ಎಂದು ದೂರಿದರು.

ಅನೇಕ ದಲಿತಪರ ಹೋರಾಟಗಾರರಿಗೆ ಪ್ರಾಣ ಬೆದರಿಕೆ ಹಾಕುವ ಪ್ರಕರಣ ನಡೆಯುತ್ತಿದ್ದು ಪೊಲೀಸರಿಂದ ರಕ್ಷಣೆ ಸಿಗುತ್ತಿಲ್ಲ ಆತ್ಮ ರಕ್ಷಣೆಗೆ ಸಶ್ತ್ರಗಳನ್ನು ಇಟ್ಟುಕೊಳ್ಳುತ್ತೇವೆ. ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳ ಬಗ್ಗೆ ಸರಿಯಾದ ತನಿಖೆಯು ನಡೆಯುತ್ತಿಲ್ಲ, ಭೂಮಾನಂದ ಪ್ರಕರಣದ 8ನೇ ಆರೋಪಿ ಭೀಮರಾಯ ಹದ್ದಿನಾಳ ಅವರನ್ನು ಬಂಧಿಸಿಲ್ಲ, ಜಿಲ್ಲೆಯ

3 ನೇ ಪುಟಕ್ಕೆ

ಬೆಂಗಳೂರಿನಲ್ಲಿ ಛಲವಾದಿ ಮಹಾಸಭಾದ 2025-26ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆ: ಸೆ.20ರಂದು

ರಾಯಚೂರು,ಸೆ.15

ಛಲವಾದಿ ಮಹಾಸಭಾದ 2025-26ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯು ಸೆ.20 ರಂದು ಬೆಂಗಳೂರಿನಲ್ಲಿ ನಡೆಯಲಿದೆ ಎಂದು ಛಲವಾದಿ ಮಹಾಸಭಾದ ರಾಜ್ಯ ನಿರ್ದೇಶಕ ಎಂ.ವಸಂತ ಹೇಳಿದರು.

ನಗರದಲ್ಲಿ ಪತ್ರಿಕಾ ಭವನದಲ್ಲಿ ಮಂಗಳವಾರ ಮಾತನಾಡಿ ಛಲವಾದಿ ಮಹಾಸಭಾದರಾ ಜ್ಯಾಧ್ಯಕ್ಷೆ ವಾಣಿಶ್ರೀರಾಮು ಅವರ ಅಧ್ಯಕ್ಷತೆಯಲ್ಲಿ ಹಾಗೂ ಛಲವಾದಿ ಮಹಾಸಂಸ್ಥಾನ ಮಠದ ಶ್ರೀಶ್ರೀಶ್ರೀ ಬಸವನಾಗಿದೇವ ಶರಣರ ದಿವ್ಯ ಸಾನ್ನಿಧ್ಯದಲ್ಲಿ ಸಭೆ ನಡೆಯಲಿದೆ. ಸಭೆಯಲ್ಲಿ ವಾರ್ಷಿಕ ಲೆಕ್ಕಪತ್ರಗಳ



ಪರಿಶೀಲನೆ, ಹಿಂದಿನ ಸಭೆಯ ನಡವಳಿಗಳ ಅನುಮೋದನೆ, ಸದಸ್ಯರ ಸಲಹೆಗಳು ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಛಲವಾದಿ ಸಮುದಾಯದ ಶೈಕ್ಷಣಿಕ ಮತ್ತು ಸಾಮಾಜಿಕ ಪ್ರಗತಿಗೆ ಆದ್ಯತೆ ನೀಡಲಾಗುತ್ತಿದ್ದು, ಬೆಂಗಳೂರಿನಲ್ಲಿ ಸುಮಾರು ₹23 ಕೋಟಿ ವೆಚ್ಚದಲ್ಲಿ ಛಲವಾದಿ ಸಮುದಾಯ ಭವನ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ

ರಾಜ್ಯಾದ್ಯಂತ ಮಹಾಸಭಾದ ಸುಮಾರು 4,800 ಸದಸ್ಯರು ಇದ್ದು, ರಾಯಚೂರು ಜಿಲ್ಲೆಯಲ್ಲಿ ಸುಮಾರು 650 ಸದಸ್ಯರು ಸಂಘಟನೆಯೊಂದಿಗೆ ಗುರುತಿಸಿಕೊಂಡಿದ್ದಾರೆ. ಸಮುದಾಯದ ಸಂಘಟನೆ ಬಲಪಡಿಸುವ ಜತೆಗೆ ಯುವಜನರು ಹಾಗೂ ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಕಾರ್ಯಕ್ರಮಗಳಿಗೆ ಒತ್ತು ನೀಡಲಾಗುತ್ತಿದೆ ಎಂದರು. ವಿದ್ಯಾರ್ಥಿಗಳಿಗೆ ಕೆಎಎಸ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ಅನುಕೂಲವಾಗುವಂತೆ ಕೋಚಿಂಗ್ ಸೆಂಟರ್ ಆರಂಭಿಸುವ ಯೋಜನೆ ರೂಪಿಸಲಾಗಿದೆ. ಪ್ರತಿಭಾವಂತ ವಿದ್ಯಾರ್ಥಿ

3 ನೇ ಪುಟಕ್ಕೆ

ಕೆಕೆಆರ್‌ಡಿಬಿ ಉದ್ದೇಶವೇ ವಿಫಲ: ಅಸಮತೋಲನ ನಿವಾರಣೆಯಾಗಿಲ್ಲ

7 ಸಾವಿರ ಕೋಟಿಗೂ ಅಧಿಕ ಅವ್ಯವಹಾರದ ಆರೋಪ 17ರಂದು ಕಲಬುರಗಿಯಲ್ಲಿ ಸಂಕಲ್ಪ ಸಮಾವೇಶ



ನವಸ್ಫೂರ್ತಿ ಸುದ್ದಿ

ರಾಯಚೂರು,ಸೆ.15-

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ) ಸ್ಥಾಪನೆಯಾಗಿ 12 ವರ್ಷ ಕಳೆದರೂ ಪ್ರಾದೇಶಿಕ ಅಸಮತೋಲನ ನಿವಾರಣೆಯಾಗದೆ ಮತ್ತಷ್ಟು ಹೆಚ್ಚಾಗಿದೆ. ಅಭಿವೃದ್ಧಿ ಅನುದಾನವನ್ನು ವೈಜ್ಞಾನಿಕವಾಗಿ ಬಳಸದೆ ಅಂದಾ-ದುಂದಿ ಕಾಮ ಗಾರಿಗಳಿಗೆ ವ್ಯಯಿಸಲಾಗುತ್ತಿದೆ. ಸಿಎಜಿ ವರದಿಯ ಪ್ರಕಾರ ₹7 ಸಾವಿರ ಕೋಟಿಗೂ ಅಧಿಕ ಹಣ ಅವ್ಯವಹಾರಕ್ಕೆ ಒಳಗಾಗಿದೆ ಎಂಬ ಆರೋಪವಿದ್ದು, ಕೆಕೆಆರ್‌ಡಿಬಿ ಸ್ಥಾಪನೆಯ ಮೂಲ ಉದ್ದೇಶವೇ ವಿಫಲವಾಗಿದೆ ಎಂದು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಹೋರಾಟ ಸಮಿತಿ ಕೇಂದ್ರ ಸಮಿತಿ ಜಿಲ್ಲಾಧ್ಯಕ್ಷ ಆರ್. ಬಸವರಾಜ್ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಲ್ಯಾಣ ಕರ್ನಾಟಕದ ಮಾನವ ಅಭಿವೃದ್ಧಿಗೆ ಆದ್ಯತೆ ನೀಡುವ ಬದಲು ರಸ್ತೆ, ಕಟ್ಟಡ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಅನುದಾನ ಬಳಕೆಯಾಗುತ್ತಿದೆ. ಹಲವು ಕಾಮಗಾರಿಗಳು ಕಾಗದದಲ್ಲಷ್ಟೇ ಕಾಣಿಸಿಕೊಂಡು ವಾಸ್ತವದಲ್ಲಿ ಅಸ್ತಿತ್ವದಲ್ಲಿಲ್ಲ ಎಂಬ ಆರೋಪಗಳು ಕೇಳಿಬರುತ್ತಿವೆ. ಹಳೆ ಕಲ್ಲು, ಹೊಸ ಬಿಲ್ಲು ಎಂಬ ಪರಿಸ್ಥಿತಿ

3 ನೇ ಪುಟಕ್ಕೆ

ಸತೀಶ್ ಜಾರಕಿಹೊಳಿ ಮೇಲಿನ ಇ.ಡಿ ದಾಳಿ ಖಂಡಿಸಿ ಪಂಜಿನ ಮೆರವಣಿಗೆ



ಸಿರವಾರ,ಸೆ.15

ಲೋಕೋಪಯೋಗಿ ಸಚಿವರಾದ ಸತೀಶ ಜಾರಕಿಹೊಳಿ ಅವರ ಮೇಲೆ ಕೇಂದ್ರ ಸರ್ಕಾರ ರಾಜಕೀಯ ಪ್ರೇರಿತವಾಗಿ ದಾಳಿ ನಡೆಸಿದೆ ಎಂದು ಆರೋಪಿಸಿ, ಭಾನುವಾರ ಸಂಜೆ ಸಿರವಾರ ಪಟ್ಟಣದಲ್ಲಿ ಜಾರಕಿಹೊಳಿ ಅಭಿಮಾನಿಗಳು, ಮಾನವಬಂಧುತ್ವ ವೇದಿಕೆಯ ಕಾರ್ಯಕರ್ತರು ಪಂಜಿನ ಮೆರವಣಿಗೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಪಂಜು ಹಿಡಿದು ಸಾಗಿದ ಪ್ರತಿಭಟನಾಕಾರರು, ಬಿಜೆಪಿ ಸರ್ಕಾರದ ವಿರುದ್ಧ ಮತ್ತು ಕೇಂದ್ರ ತನಿಖಾ ಸಂಸ್ಥೆಗಳ ದುರ್ಬಳಕೆ ವಿರುದ್ಧ ಘೋಷಣೆಗಳನ್ನು ಕೂಗಿದರು. ಸತೀಶ್ ಜಾರಕಿಹೊಳಿ ಅವರಂತಹ ಅಹಿಂದ ನಾಯಕನನ್ನು ಹತ್ತಿಕ್ಕುವ ಪ್ರಯತ್ನ

3 ನೇ ಪುಟಕ್ಕೆ

ಶಾಲೆಯ ಮುಖ್ಯ ಶಿಕ್ಷಕನ ವಿರುದ್ಧ ದೂರು; ವಿಚಾರಣೆ ವೇಳೆ ಡಿಡಿಪಿಐ ಗುಂಡಾ ವರ್ತನೆ ಆರೋಪ

ರಾಯಚೂರು,ಸೆ.15

ಮಾನ್ವಿ ತಾಲೂಕಿನ ಅರೋಲಿ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದಿರುವ ಅವ್ಯವಹಾರದ ಕುರಿತು ಮುಖ್ಯ ಶಿಕ್ಷಕ ಶಂಕ್ರಪ್ಪರವರ ಮೇಲೆ ಕ್ರಮ ಕೈಗೊಳ್ಳಲು ಡಿಡಿಪಿಐ ಮನವಿ ಮಾಡಿದರೆ ಬೆದರಿಕೆ ಹಾಕಿದ್ದು ಅವರ ವಿರುದ್ಧ ಗುಂಡಾ ಕಾಯ್ದೆಯಡಿ ಶಿಸ್ತುಕ್ರಮ ಕೈಗೊಳ್ಳಬೇಕು ಎಂದು ದೂರುದಾರ ಚನ್ನಬಸವ ಅರೋಲಿ ಆರೋಪಿಸಿದರು.

ಅವರು ಮಂಗಳವಾರ ಸುದ್ದಿ ಗೋಷ್ಠಿ ಯಲ್ಲಿ ಮಾತನಾಡಿ, ಶಾಲೆಯಲ್ಲಿ ಬಿಸಿಯೂಟ,ಮೊಟ್ಟೆ ನೀಡುವುದು,ಹಾಲು, ಮಕ್ಕಳಿಗೆ ಶೂ ಸಾಕ್ಸ್ ನೀಡುವಲ್ಲಿ ಅವ್ಯವಹಾರ ಮಾಡಿದ್ದಾರೆ ಎಂದು ದೂರು ಸಲ್ಲಿಸಿ



ಎರೆಡು ವರ್ಷ ಕಳೆದರೂ ಕ್ರಮ ಕೈಗೊಂಡಿಲ್ಲ, ಈ ಬಗ್ಗೆ ಡಿಡಿಪಿಐ ಮಲ್ಲಿಕಾರ್ಜುನ ಅವರು ಕಚೇರಿಯಲ್ಲಿ ಭೇಟಿಯಾದಾಗ ಬೆದರಿಕೆ ಹಾಕಿದ್ದಾರೆ, ನನ್ನ ಊರಿನ ಶಾಲೆಯ ಬಗ್ಗೆ ಕಾಳಜಿಯಿಂದ ದೂರು ನೀಡಿದರೆ ದುರುದ್ದೇಶದಿಂದ ಮಾಡುತ್ತಿದ್ದೇನೆ ಎಂದು ಬೆದರಿಸಿದ್ದಾರೆ ಎಂದು ದೂರಿದರು.

ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ಸಂಬಂಧವೇ ಇಲ್ಲದ ವ್ಯಕ್ತಿಗಳನ್ನು ಕರೆಸಿ ಏಕವಚನದಲ್ಲಿ ಬೈದು ದಲಿತನಾದ ನನಗೆ ಎಲ್ಲರೆದುರು ಅವಮಾನ ಮಾಡಿದ್ದಾರೆ. ಈ ಬಗ್ಗೆ ಕೂಲಂಕುಷವಾಗಿ ತನಿಖೆ ನಡೆಸಿ ಡಿಡಿಪಿಐ ಮಲ್ಲಿಕಾರ್ಜುನ ವಿರುದ್ದ ಕ್ರಮ ಎಸ್ ಸಿ ಎಸ್ ಟಿ ಗುಂಡಾ ವರ್ತನೆ ಯಡಿ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಬೇಕು. ಡಿಡಿಪಿಐ,ಬಿಇಒ ಸೇರಿ ಅನೇಕರು ದಲಿತರಾದರೂ ದಲಿತ ದೂರುದಾರರಿಗೆ ಬೆದರಿಕೆ ಹಾಕುತ್ತಿದ್ದು ದುರ್ದೈವದ ಸಂಗತಿ ಎಂದು ಹೇಳಿದರು.

ಬೀದಿ ನಾಯಿಗಳ ಅಟ್ಟಹಾಸಕ್ಕೆ ಬೆಚ್ಚಿಬಿದ್ದ ರಾಯಚೂರು ಜನತೆ

3 ವರ್ಷದ ಮಗುವಿನ ಮೇಲೆ ಗುಂಪಾಗಿ ದಾಳಿ

ರಾಯಚೂರು,ಸೆ.15-

ನಗರದಲ್ಲಿ ಬೀದಿ ನಾಯಿಗಳ ಹಾವಳಿ ದಿನದಿಂದ ದಿನಕ್ಕೆ ಮಿತಿ ಮೀರುತ್ತಿದ್ದು, ಇದೀಗ ಮೂರು ವರ್ಷದ ಮಗುವಿನ ಮೇಲೆ ನಾಯಿಗಳ ಗುಂಪು ಭೀಕರವಾಗಿ ದಾಳಿ ನಡೆಸಿರುವ ಘಟನೆ ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದೆ. ವಾರ್ಡ್ ನಂ.28 ಮತ್ತು 29ರ ಎಲ್‌ಬಿಎಸ್ ನಗರ ಹಾಗೂ ಪೊತಗಲ್ ರಸ್ತೆ ಪ್ರದೇಶಗಳಲ್ಲಿ ಕಳೆದ ಎರಡು ದಿನಗಳಲ್ಲಿ ನಾಲ್ವರು ಮಕ್ಕಳು ಸೇರಿದಂತೆ ಒಟ್ಟು ಆರು ಮಂದಿಯ ಮೇಲೆ ಬೀದಿ ನಾಯಿಗಳು ದಾಳಿ ನಡೆಸಿರುವುದು ನಗರದಲ್ಲಿ ಆತಂಕದ ವಾತಾವರಣ ನಿರ್ಮಿಸಿದೆ.

ಸೆ.13ರಂದು ಸಂಜೆ ಸುಮಾರು 4.30ರ ವೇಳೆಗೆ ಪೊತಗಲ್ ರಸ್ತೆಯ ಮನೆಯೊಂದರ ಮುಂದೆ ಆಟವಾಡುತ್ತಿದ್ದ ಮೂರು ವರ್ಷದ ಮಗುವಿನ ಮೇಲೆ ಬೀದಿ ನಾಯಿಗಳ ಗುಂಪು ಏಕಾಏಕಿ ದಾಳಿ ನಡೆಸಿದೆ. ದಾಳಿಯಲ್ಲಿ ಮಗುವಿನ ಬಲಗೈಗೆ ಗಂಭೀರ ಗಾಯವಾಗಿದ್ದು, ಪೋಷಕರು



ಆತಂಕಕ್ಕೊಳಗಾಗಿದ್ದಾರೆ. ಮನೆಯ ಮುಂದೆ ಆಟವಾಡುತ್ತಿದ್ದ ಮಗುವಿಗೂ ಸುರಕ್ಷತೆ ಇಲ್ಲದ ಪರಿಸ್ಥಿತಿ ನಿರ್ಮಾಣವಾಗಿರುವುದು ಪಾಲಿಕೆಯ ಬೀದಿ ನಾಯಿ ನಿಯಂತ್ರಣ ಕ್ರಮಗಳ ಕುರಿತು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಶಾಲೆಗೆ ಹೋಗುವ ಮಕ್ಕಳಿಗೂ ಭಯ

ಬೀದಿ ನಾಯಿಗಳ ಗುಂಪು ರಸ್ತೆಯಲ್ಲಿ ಗುಂಪುಗೂಡಿ ಓಡಾಡುತ್ತಿರುವುದರಿಂದ ಶಾಲಾ ಮಕ್ಕಳು, ಮಹಿಳೆಯರು ಹಾಗೂ ವೃದ್ದರು ಮನೆಯಿಂದ ಹೊರಬರಲು ಆತಂಕಪಡುವಂತಾಗಿದೆ. ರಾತ್ರಿ ವೇಳೆ ಬೈಕ್ ಸವಾರರನ್ನು ನಾಯಿಗಳು ಹಿಂಬಾಲಿಸುತ್ತಿರುವುದರಿಂದ ಅಪಘಾತದ ಅಪಾಯವೂ ಹೆಚ್ಚಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಹೋಟೆಲ್‌ಗಳು ಹಾಗೂ ಮಾಂಸದ ಅಂಗಡಿಗಳ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡದಿರುವುದರಿಂದ ನಾಯಿಗಳ ಸಂಖ್ಯೆಯೂ, ಹಾವಳಿಯೂ ಹೆಚ್ಚುತ್ತಿದೆ ಎಂಬ ಆರೋಪ ಸಾರ್ವಜನಿಕರಿಂದ ಕೇಳಿಬಂದಿದೆ.

''ಮತ್ತೊಂದು ಅನಾಹುತಕ್ಕೆ ಕಾಯಬೇಡಿ'' ಸಾರ್ವಜನಿಕರ ಪರವಾಗಿ ಮೊಹಮ್ಮದ್

3 ನೇ ಪುಟಕ್ಕೆ

ನಾನಷ್ಟೇ ಎಂಬುದು ಏಕಚಕ್ರಾಧಿಪತ್ಯ, ನಾವಷ್ಟೇ ಎಂಬುದು ತಾರತಮ್ಯ, ನಾವೆಲ್ಲರೂ ಎಂಬುದು ಮಾತ್ರ ಪ್ರಜಾಪ್ರಭುತ್ವ- ಡಾ.ಕರಿಗೂಳಿ

ಗಂಗಾವತಿ,ಸೆ.15-

ತಾಲೂಕಿನ ಶ್ರೀರಾಮನಗರದ ಚಿಲುಕೂರಿ ನಾಗೇಶ್ವರ ರಾವ್ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ 15.09.2026ರಂದು ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ಮತ್ತು ಸರ್ ಎಂ.ವಿಶ್ವೇಶ್ವರಯ್ಯ ರವರ ಜಯಂತಿಯ ಅಂಗವಾಗಿ ಇಂಜನೀಯರಗಳ ದಿನಾಚರಣೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.ಸಸಿಗೆ ನೀರೆರೆದು,

ಸರ್ ಎಂ.ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮೂಲಕ ಕಾರ್ಯಕ್ರಮ ಉದ್ಘಾಟಿಲಾಯಿತು. ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಡಾ.ಶಶಿಕುಮಾರ ಅವರು



ಅಂತರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಔಚಿತ್ಯವನ್ನು ತಿಳಿಸಿದರು. ಅಧ್ಯಕ್ಷತೆ ವಹಿಸಿಕೊಂಡಿದ್ದ ಕಾಲೇಜಿನ ಪ್ರಾಂಶುಪಾಲರಾದ ಡಾ.ಕರಿಗೂಳಿ ಅವರು ಮಾತನಾಡಿ ಪ್ರಜಾಪ್ರಭುತ್ವಕ್ಕಿಂತಲೂ ಮೊದಲು ಜಾರಿಯಲ್ಲಿದ್ದ ಪ್ರಭುತ್ವಗಳ ಪ್ರಕಾರಗಳನ್ನು ವಿವರಿಸಿದರು, ಪ್ರಜಾಪ್ರಭುತ್ವದ ಪ್ರಾಮುಖ್ಯತೆಯನ್ನು ತಿಳಿಸಿದರು. ಪ್ರಜಾಪ್ರಭುತ್ವದ ಮೂಲಕ ಸಹಬಾಳ್ವೆಯ ವಾತಾವರಣ ಸೃಷ್ಟಿಸಿ ನ್ಯಾಯಯುತ ಸಮಾಜದ ನಿರ್ಮಾಣ ಮಾಡಬೇಕಾದ ಜವಾಬ್ದಾರಿ ಪ್ರತಿ ನಾಗರೀಕರದ್ದು, ವಿಶೇಷವಾಗಿ ಯುವಜನತೆದ್ದು ಎಂದರು.

ಈ ನಿಟ್ಟಿನಲ್ಲಿ ಜನಸಾಮಾನ್ಯರಿಗೆ ಪ್ರಜಾಪ್ರಭುತ್ವದ ಮೌಲ್ಯಗಳ ಹಾಗೂ ಸಾವಿಧಾನಿಕ ಪ್ರಕ್ರಿಯೆಗಳ ಜಾಗೃತಿ ಮೂಡಿಸುವುದು ಇಂದಿನ ಅವಶ್ಯಕತೆ ಎಂದರು. ತಾರತಮ್ಯಗಳು ಅಂತ್ಯವಾಗಿ, ಸಮಾನತೆ, ಸಹಬಾಳ್ವೆ ಸಾಧ್ಯವಾಗದೇ, ಪ್ರಜಾಪ್ರಭುತ್ವ ಯಶಸ್ವಿಯಾಗದು ಎಂದರು .ಅಧ್ಯಾಪಕರಾದ ಡಾ.ವಿರುಪಾಕ್ಷ. ಕೆ, ಉಪನ್ಯಾಸಕರಾದ ವೆಂಕಟರಾಜು,

3 ನೇ ಪುಟಕ್ಕೆ

100 ದಿನ ಪೂರೈಸಿದ ಡಿಕೆಶಿ ಸರ್ಕಾರದ ಮೌಲ್ಯಮಾಪನಕ್ಕೆ ಮುಂದಾದ ಕೈಕಮಾಂಡ್

ಬೆಂಗಳೂರು, ಸೆ.15-

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸರ್ಕಾರಕ್ಕೆ 100 ದಿನ ಭರ್ತಿಯಾದ ಸಂದರ್ಭದಲ್ಲಿ ಸಚಿವರ ಮೌಲ್ಯಮಾಪನಕ್ಕೆ ಹೈಕಮಾಂಡ್ ಮುಂದಾಗಿದೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ನಾಯಕ ರಣದೀಪ್ ಸಿಂಗ್ ಸುರ್ಜೇವಾಲ ಇಂದು ಬೆಂಗಳೂರಿಗೆ ಆಗಮಿಸುತ್ತಿದ್ದು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಇತರ ಪ್ರಮುಖರ ಜೊತೆ ಚರ್ಚೆ ನಡೆಸಲಿದ್ದಾರೆ.

ಡಿ.ಕೆ.ಶಿವಕುಮಾರ್ ಅವರ ಸರ್ಕಾರ ಇತ್ತೀಚೆಗೆ ಅದ್ದೂರಿಯಾದ ಶತದಿನೋತ್ಸ ವ ಆಚರಿಸಿಕೊಂಡಿದೆ. ಆದರೆ ಸಂಪುಟದ ಬಹುತೇಕ ಸಚಿವರು ಇನ್ನೂ ತಮ ಇಲಾಖೆಯ ಕಾರ್ಯಭಾರಗಳನ್ನೇ ವಹಿಸಿಕೊಂಡಿಲ್ಲ. ಹೀಗಾಗಿ ಹೈಕಮಾಂಡ್ ತೀವ್ರ ಅಸಮಾಧಾನ ಹೊಂದಿದೆ ಎಂದು ಹೇಳಲಾಗುತ್ತಿದೆ.ಬರ ನಿರ್ವಹಣೆ ವಿಚಾರವಾಗಿಯೂ ಕೆಲ ಸಚಿವರು ನಿರ್ಲಕ್ಷ್ಯ ವಹಿಸಿದ್ದು,



ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಕಠಿಣ ಸೂಚನೆಗೂ ಕ್ಯಾರೆ ಎನ್ನುತ್ತಿಲ್ಲ. ಈ ಹಿನ್ನೆಲೆಯಲ್ಲಿ ಹೈಕಮಾಂಡ್ ಖುದ್ದು ಅಖಾಡಕ್ಕಿಳಿದಿದೆ.

ಮುಖ್ಯಮಂತ್ರಿಯವರ ಜೊತೆ ಚರ್ಚೆ ನಡೆಸುವ ವೇಳೆಯಲ್ಲಿ ಸಂಪುಟ ಸಚಿವರ ಕಾರ್ಯವೈಖರಿ ಬಗ್ಗೆ ಸಮಗ್ರ ಮಾಹಿತಿ ಕಲೆ ಹಾಕಲಾಗುತ್ತದೆ ಎಂಬ ಮಾಹಿತಿ ಇದೆ. ಈ ನಿಟ್ಟಿನಲ್ಲಿ ಈಗಾಗಲೇ ಅನೌಪಚಾರಿಕ ಸಂದೇಶ ರವಾನೆಯಾಗಿದ್ದು, ಇಲಾಖಾವಾರು ಸಚಿವರ ಸಾಧನೆಯ ವರದಿಯನ್ನು ಸಜ್ಜುಗೊಳಿಸುವಂತೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.ಸರ್ಕಾರಕ್ಕೆ ಇನ್ನೂ ಒಂದು ವರ್ಷ 8 ತಿಂಗಳು ಮಾತ್ರ ಕಾಲಾವಧಿ ಇದೆ. ಅಷ್ಟರಲ್ಲಿ ಉತ್ತಮವಾಗಿ ಕೆಲಸ ನಿರ್ವಹಿಸಿ ಜನ ಮನ್ನಣೆಗಳಿಸುವುದು ದೊಡ್ಡ ಸವಾಲು. ಅಧಿಕಾರ ಹಸ್ತಾಂತರ ಪರ್ವ ಪಕ್ಷಕ್ಕೆ ಹಾನಿ ಮಾಡಿದೆ. ಸಿದ್ದರಾಮಯ್ಯ ಅವರ ಪದಚ್ಯುತಿ ಪರಿಣಾಮ ಬಗ್ಗೆ ಹೈಕಮಾಂಡ್ ಚಿಂತೆಗೀಡಾಗಿದೆ. ಅದನ್ನು ಸರಿದೂಗಿಸಬೇಕಾದರೆ ಸರ್ಕಾರದ ಉತ್ತಮ ಕಾರ್ಯ ನಿರ್ವಹಣೆ ಅತ್ಯಗತ್ಯ ಎಂಬ ನಿಲುವನ್ನು ಹೈಕಮಾಂಡ್ ಹೊಂದಿದೆ.

ಡಿ.ಕೆ.ಶಿವಕುಮಾರ್ ಅವರು ಧಾವಂತದಲ್ಲಿಯೇ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ ಕೆಲವು ಸಚಿವರು ತಮ ಧೋರಣೆಯನ್ನು ಬದಲಾಯಿಸಿಕೊಂಡಿಲ್ಲ. ಎಂದಿನಂತೆ ದಪ್ಪಚರ್ಮದವರಂತೆ ವರ್ತಿಸುತ್ತಿದ್ದಾರೆ ಎಂಬ ಆರೋಪಗಳಿವೆ.

ಒಂದೆಡೆ ಸಚಿವ ಸ್ಥಾನ ಸಿಗದೇ ಅಸಮಾಧಾನಗೊಂಡಿರುವ ಶಾಸಕರ ಬಹಿರಂಗ ಹೇಳಿಕೆಗಳು, ಟೀಕೆಗಳು ಪಕ್ಷಕ್ಕೆ ಮುಜುಗರ ಉಂಟುಮಾಡುತ್ತಿವೆ. ಮತ್ತೊಂದೆಡೆ ಸಚಿವರ ಉಡಾಫೆತನ ಮುಂದಿನ ಚುನಾವಣೆ ಮೇಲೆ ಕೆಟ್ಟ ಪರಿಣಾಮ ಬೀರಬಹುದು ಎಂಬ ಲೆಕ್ಕಾಚಾರಗಳಿವೆ. ಈ ಹಂತದಲ್ಲಿ ಮತ್ತೊಮ್ಮೆ ಸಂಪುಟ ಪುನರ್ ರಚನೆ ಕಷ್ಟಸಾಧ್ಯ. ಅದಕ್ಕಾಗಿ ಸಚಿವರನ್ನು ಕಾಲ ಕಾಲಕ್ಕೆ ಮೌಲ್ಯಮಾಪನಕ್ಕೊಳಪಡಿಸಿ ಜಾಗೃತವಾಗಿಡಲು ಪ್ರಯತ್ನಿಸಲಾಗುತ್ತಿದೆ ಎಂದು ಹೇಳಲಾಗಿದೆ.

ಬೆಂಗಳೂರಿಗೆ ಆಗಮಿಸುವ ರಣದೀಪ್ ಸಿಂಗ್ ಸುರ್ಜೇವಾಲ ಪ್ರಮುಖವಾಗಿ ಡಿ.ಕೆ.ಶಿವಕುಮಾರ್ ಮತ್ತು ಬಿ.ಕೆ.ಹರಿಪ್ರಸಾದ್ ನಡುವೆ ಉಂಟಾಗಿರುವ ವೈಮನಸ್ಯವನ್ನು ಸರಿಪಡಿಸಲು ಪ್ರಯತ್ನಿಸಲಿದ್ದಾರೆ ಎಂದು ಹೇಳಲಾಗಿದೆ.ಶತದಿನೋತ್ಸ ವಕ್ಕೆ ತಮನ್ನು ಕಡೆಗಣಿಸಿರುವ ಕುರಿತು

3 ನೇ ಪುಟಕ್ಕೆ

ಸಮಸ್ಯೆಗಳನ್ನು ಸ್ಥಳದಲ್ಲಿಯೇ ಆಲಿಸಿ, ಪರಿಹರಿಸುವುದೇ ಪ್ರಜಾಸೇವಾ ಆಂದೋಲನ : ತಹಶೀಲ್ದಾರ್ ಶಿವಾನಂದ್ ಮೇತ್ರೆ



ಔರಾದ್,ಸೆ.15-

ಕಮಲನಗರ್ ಹಾಗೂ ಔರಾದ್ ತಾಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸುವಂತೆ ಆಗ್ರಹಿಸಿ ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿ ಸೆಪ್ಟೆಂಬರ್ 19ರಂದು ಔರಾದ್ ಪಟ್ಟಣದಲ್ಲಿ ಬಿಜೆಪಿ ಔರಾದ್ ಮಂಡಲದ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ.

ಶಾಸಕ ಪ್ರಭು ಚವ್ಹಾಣ ಅವರ ನೇತೃತ್ವದಲ್ಲಿ ರವಿವಾರ ನಡೆದ ಸಭೆಯಲ್ಲಿ ಮುಖಂಡರು ಮತ್ತು ಕಾರ್ಯಕರ್ತರು ಪ್ರತಿಭಟನೆಯ ರೂಪುರೇಷೆಗಳ ಕುರಿತು ಸುದೀರ್ಘ ಚರ್ಚೆ ನಡೆಸಿ ವಿವಿಧ ಸಲಹೆಗಳನ್ನು ನೀಡಿದರು.

ಪ್ರತಿಭಟನೆಗೆ ಔರಾದ್ ಪಟ್ಟಣದ ಅಮರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಲಾಗುವುದು. ಬಳಿಕ ಬಿಜೆಪಿ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ರೈತರೊಂದಿಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಎಪಿಎಂಸಿ ವೃತ್ತದವರೆಗೆ ತೆರಳಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾಗುವುದು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು.

ಈ ವೇಳೆ ಮಾತನಾಡಿದ ಶಾಸಕ ಪ್ರಭು ಚವ್ಹಾಣ, ಔರಾದ್ ಹಾಗೂ ಕಮಲನಗರ್ ತಾಲೂಕುಗಳಲ್ಲಿ ಮಳೆ ಕೊರತೆಯಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮುಂಗಾರು ಹಂಗಾಮಿನಲ್ಲಿ ಸಮರ್ಪಕ ಮಳೆಯಾಗದೆ ಬೆಳೆಗಳು ಹಾನಿಗೊಳಗಾಗಿದ್ದು, ರೈತರು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಹಲವು ಬಾರಿ ಸರ್ಕಾರದ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ರೈತರಿಗೆ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವ ಸರ್ಕಾರ ಪಹಣಿ ತಿದ್ದುಪಡಿ, ಮ್ಯುಟೇಷನ್ ಸೇರಿದಂತೆ ಹಲವು ಸೇವೆಗಳ ಶುಲ್ಕ ಹೆಚ್ಚಿಸಿ ರೈತರು ಮತ್ತು ಸಾಮಾನ್ಯ ಜನರ ಮೇಲೆ ಹೆಚ್ಚುವರಿ ಹೊರೆ ಹಾಕಿದೆ. ಸಾವಿರಾರು ರೇಷನ್ ಕಾರ್ಡ್‌ಗಳನ್ನು ರದ್ದುಪಡಿಸಿ ಬಡ ಕುಟುಂಬಗಳಿಗೆ ತೊಂದರೆ ನೀಡಲಾಗಿದೆ. ವೃದ್ಧಾಪ್ಯ ವೇತನ ಸೇರಿದಂತೆ ಸಾಮಾಜಿಕ ಭದ್ರತಾ ಯೋಜನೆಗಳಲ್ಲೂ ಸಮಸ್ಯೆಗಳು ಉಂಟಾಗಿವೆ ಎಂದು ಅವರು ಟೀಕಿಸಿದರು.

ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದ 560 ಕೋಟಿ ರೂ. ವೆಚ್ಚದ ಕೆರೆ ತುಂಬಿಸುವ ಯೋಜನೆ ಹಾಗೂ ಕಾರಂಜಾ ಜಲಾಶಯ ದಿಂದ ನೀರು ಸರಬರಾಜು ಯೋಜನೆ ಸೇರಿದಂತೆ ಹಲವು ಕಾಮಗಾರಿಗಳನ್ನು ಸರ್ಕಾರ ಉದ್ದೇಶಪೂರ್ವಕವಾಗಿ ವಿಳಂಬಗೊಳಿಸುತ್ತಿದೆ ಎಂದು ಆರೋಪಿಸಿದ ಅವರು, ರೈತರ ಹಿತಾಸಕ್ತಿಗಾಗಿ ಸೆ.19ರ ಪ್ರತಿಭಟನೆಯನ್ನು ಬೃಹತ್ ಹೋರಾಟವನ್ನಾಗಿ ರೂಪಿಸಲಾಗುವುದು ಎಂದರು.

ಔರಾದ್ ಹಾಗೂ ಕಮಲನಗರ್ ತಾಲೂಕಿನ ಬಿಜೆಪಿ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು, ರೈತರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರತಿಭಟನೆಯನ್ನು ಯಶಸ್ವಿಗೊಳಿಸಬೇಕು ಎಂದು ಶಾಸಕ ಪ್ರಭು ಚವ್ಹಾಣ ಕರೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕಿರಣ್ ಪಾಟೀಲ್, ರಾಮಶೆಟ್ಟಿ ಪನ್ನಾಳೆ, ರಂಗರಾವ್ ಜಾಧವ್, ಶಿವರಾಜ್ ಅಲ್ಮಾಜೆ, ಶಿವಾಜಿರಾವ್ ಪಾಟೀಲ್ ಮುಂಗನಾಳ್, ಶಿವಾಜಿರಾವ್ ಕಾಳೆ, ಸತೀಷ್ ಪಾಟೀಲ್, ಧೊಂಡಿಬಾ ನರೋಟೆ, ಬಾಬುರಾವ್ ತೋರ್ಣಾವಾಡಿ, ಪ್ರವೀಣ್ ಕಾರಬಾರಿ, ಖಂಡೋಬಾ ಕಂಗಟೆ, ಬಂಟಿ ರಾಂಪೂರೆ, ರಾಜಕುಮಾರ್ ಸೋರಾಳೆ, ಉದಯ್ ಸೋಲಾಪೂರೆ, ಸಂಜು ಮುರ್ಕೆ, ಸಚಿನ್ ಬಿರಾದಾರ್ ರವೀಂದ್ರರೆಡ್ಡಿ, ಪ್ರಕಾಶ್ ಮೇತ್ರೆ, ವಿಜಯಕುಮಾರ್ ದೇಶಮುಖ, ಗುಂಡಪ್ಪ ಬಿರಾದಾರ್ ರಮೇಶ್ ಪಾಟೀಲ್, ದೇವಾನಂದ್ ಪಾಟೀಲ್, ಪ್ರಭುರಾವ್ ಜೀರ್ಗೆ, ಪ್ರದೀಪ್ ಪವಾರ್ ಕೇರಬಾ ಪವಾರ್ ಪ್ರಕಾಶ್ ಅಲ್ಮಾಜೆ ಹಾಗೂ ಬಸವರಾಜ್ ಹಳ್ಳೆ ಸೇರಿದಂತೆ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಜಗತ್ ವೃತ್ತ ಸಮೀಪದ ಜಂಕ್ಷನ್‌ಗೆ ಭಾರತ ಮಾತಾ ವೃತ್ತ ನಾಮಕರಣಕ್ಕೆ ಒತ್ತಾಯ



ಕಲಬುರಗಿ,ಸೆ.15-

ನಗರದ ಜಗತ್ ವೃತ್ತದಿಂದ ಗೋವಾ ಹೋಟೆಲ್ ಕಡೆಗೆ ಸಾಗುವ ರಸ್ತೆಯಲ್ಲಿ ಉದ್ಯಾನವನಕ್ಕೆ ತೆರಳುವ ಮೂರು ರಸ್ತೆಗಳು ಸೇರುವ ಜಂಕ್ಷನ್‌ಗೆ ಭಾರತ ಮಾತಾ ವೃತ್ತ ಎಂದು ನಾಮಕರಣ ಮಾಡಬೇಕು ಎಂದು ಆಗ್ರಹಿಸಿ ಬಹಿಷ್ಕೃತ ವೆಲ್ಫೇರ್ ಫೌಂಡೇಶನ್ ಇಂಡಿಯಾ, ಕಲ್ಯಾಣ ಕರ್ನಾಟಕ ಘಟಕದ ಅಧ್ಯಕ್ಷ ರಾಹುಲ್ ಪರೀಟ್ ನೇತೃತ್ವದಲ್ಲಿ ವಿವಿಧ ಸಂಘಟನೆಗಳ ಮುಖಂಡರು ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದರು.

ನಗರದ ವಿವಿಧ ವೃತ್ತಗಳಿಗೆ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಗಣ್ಯರ ಹೆಸರುಗಳನ್ನು ನಾಮಕರಣ ಮಾಡಲಾಗಿದೆ. ಆದರೆ ದೇಶದ ಏಕತೆ, ಅಖಂಡತೆ ಮತ್ತು ದೇಶಭಕ್ತಿಯ ಪ್ರತೀಕವಾಗಿರುವ ಭಾರತ ಮಾತೆ ಹೆಸರಿನ ವೃತ್ತ ನಗರದಲ್ಲಿ ಇಲ್ಲದಿರುವುದು ವಿಷಾದನೀಯ ಎಂದು ಮುಖಂಡರು ತಿಳಿಸಿದರು.

ದಕ್ಷಿಣ ಭಾರತದಲ್ಲೇ ಮೊದಲ ಭಾರತ ಮಾತಾ ವೃತ್ತವನ್ನು ಕಲಬುರಗಿ ಮಹಾನಗರ ಪಾಲಿಕೆ ಕಚೇರಿ ಪಕ್ಕದಲ್ಲಿ ಸ್ಥಾಪಿಸಿರುವುದು ನಗರದ ಹೆಗ್ಗಳಿಕೆಯಾಗಿದೆ. ಇದೇ ಹಿನ್ನೆಲೆಯಲ್ಲಿ ನಗರದ ಮತ್ತೊಂದು ಪ್ರಮುಖ ಜಂಕ್ಷನ್‌ಗೆ ಭಾರತ ಮಾತಾ ವೃತ್ತ ಎಂದು ನಾಮಕರಣ ಮಾಡುವ ಮೂಲಕ ದೇಶಪ್ರೇಮ ಮತ್ತು ರಾಷ್ಟ್ರೀಯ ಏಕತೆಯ ಸಂದೇಶವನ್ನು ಮತ್ತಷ್ಟು ಬಲಪಡಿಸಬೇಕು ಎಂದು ಅವರು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪವನ ಟೈಗರ್ ಮನೋಜಕುಮಾರ ನಾಯಕ, ಉದಯ ಸಂಗನ್, ಶಿವಲಿಂಗ ಹುಲಿಮನಿ, ಸತೀಶ ರಾಂಪೂರೆ,

ವಿಶಾಲ ವಾಳಗೆ, ರಮೇಶ ಅಳ್ಳೊಳ್ಳಿ, ಸಿದ್ದಲಿಂಗ ಓಕಳಿ, ಮಲ್ಲಿಕಾರ್ಜುನ ಕೊಡ್ಲಿ, ಅಂಬರೀಷ ಪರೀಟ್, ಶ್ರೀಕಾಂತ ದೊಡ್ಡಮನಿ ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಮಳೆ ಕೊರತೆ : ರೈತರ ಸಂಕಷ್ಟ ನಿವಾರಣೆಗೆ ರಾವೂರಿನಲ್ಲಿ ಮುಸ್ಲಿಂ ಸಮಾಜದಿಂದ ವಿಶೇಷ ಪ್ರಾರ್ಥನೆ



ಶಹಾಬಾದ್,ಸೆ.15-

ಮಳೆ ಕೊರತೆಯಿಂದ ರೈತರು ಹಾಗೂ ಜನರು ಸಂಕಷ್ಟಕ್ಕೆ ಸಿಲುಕಿರುವ ಹಿನ್ನೆಲೆಯಲ್ಲಿ ಉತ್ತಮ ಮಳೆಯಾಗಿ ಜಲಮೂಲಗಳು ತುಂಬಿ ರೈತರ ಬದುಕು ಹಸನಾಗಲಿ ಎಂದು ಆಶಿಸಿ ಶಹಾಬಾದ್ ತಾಲೂಕಿನ ರಾವೂರ ಗ್ರಾಮದಲ್ಲಿ ಮುಸ್ಲಿಂ ಸಮಾಜದ ವತಿಯಿಂದ ರವಿವಾರ ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಗ್ರಾಮದ ಹೊರವಲಯದಲ್ಲಿ ಬೆಳಿಗ್ಗೆ 10 ಗಂಟೆಗೆ ನಡೆದ ಪ್ರಾರ್ಥನಾ ಕಾರ್ಯಕ್ರಮವು ಮೌಲಾನಾ ಕೈಸರ್ ಸಾಬ್ ರಷದಿ ಅವರ ಸಮ್ಮುಖದಲ್ಲಿ ನಡೆಯಿತು. ರಾವೂರ ಗ್ರಾಮದ ಮುಸ್ಲಿಂ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ನಾಡಿನಲ್ಲಿ ಉತ್ತಮ ಮಳೆಯಾಗಿ ರೈತರು ನೆಮ್ಮದಿಯಿಂದ ಜೀವನ ನಡೆಸುವಂತಾಗಲಿ ಎಂದು ಅಲ್ಲಾಹನಲ್ಲಿ ಪ್ರಾರ್ಥಿಸಿದರು.

ಮಳೆಯ ಕೊರತೆಯಿಂದ ಜನರು ಜೀವನೋಪಾಯಕ್ಕಾಗಿ ಬೇರೆ ಪ್ರದೇಶಗಳಿಗೆ ವಲಸೆ ಹೋಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಹಳ್ಳ, ನದಿಗಳು ಹಾಗೂ ಜಲಮೂಲಗಳಲ್ಲಿ ನೀರಿನ ಕೊರತೆಯಿಂದ ಜಾನುವಾರುಗಳು, ಪ್ರಾಣಿ-ಪಕ್ಷಿಗಳು ಸೇರಿದಂತೆ ಮೂಕ ಜೀವಿಗಳೂ ಸಂಕಷ್ಟ ಅನುಭವಿಸುತ್ತಿವೆ. ಅವುಗಳ ಮೇಲೂ ಕರುಣೆ ತೋರಿ ಉತ್ತಮ ಮಳೆ ಸುರಿಸಿ ನೀರಿನ ವ್ಯವಸ್ಥೆ ಕಲ್ಪಿಸಬೇಕು ಎಂದು ವಿಶೇಷ ಪ್ರಾರ್ಥನೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಮೌಲಾನಾ ಕೈಸರ್ ಸಾಬ್ ರಷದಿ, ''ಭಗವಂತನಲ್ಲಿ ಸಂಪೂರ್ಣ ವಿಶ್ವಾಸವಿಟ್ಟು ಮಳೆಗಾಗಿ ಪ್ರಾರ್ಥಿಸಿದ್ದೇವೆ. ಪ್ರವಾದಿ ಮೊಹಮ್ಮದ್ ಅವರನ್ನು ಸ್ಮರಿಸಿಕೊಂಡು ವಿಶೇಷ ದುಆ ಸಲ್ಲಿಸಿದ್ದೇವೆ. ಅಲ್ಲಾಹ ಖಂಡಿತವಾಗಿಯೂ ಮಳೆ ಕರುಣಿಸಿ ಹಳ್ಳ-ನದಿಗಳನ್ನು ತುಂಬಿಸಿ ರೈತರಿಗೆ ನೆರವಾಗುತ್ತಾನೆ ಎಂಬ ವಿಶ್ವಾಸ ನಮಗಿದೆ'' ಎಂದು ಹೇಳಿದರು.

ಪ್ರಾರ್ಥನಾ ಕಾರ್ಯಕ್ರಮದಲ್ಲಿ ಅಬ್ದುಲ್ ಅಝೀಝ್ ಸೀಠ್, ಮೌಲಾನಾ ಹಾಜಿ ಕರೀಂ, ಮೌಲಾನಾ ರೌಫ್, ಮೌಲಾನಾ ತೌಸಿಫ್, ಚೋಟುಮಿಯಾ ಆಡಿಕಿ, ಅಬ್ಜಲ್ ತುನ್ನೂರ್ ಸೇರಿದಂತೆ ರಾವೂರ ಗ್ರಾಮದ ಸಮಸ್ತ ಮುಸ್ಲಿಂ ಬಾಂಧವರು ಉಪಸ್ಥಿತರಿದ್ದರು.

ಬರ ಘೋಷಣೆಗೆ ಆಗ್ರಹಿಸಿ ಸೆ.19ರಂದು ಔರಾದ್‌ನಲ್ಲಿ ಬಿಜೆಪಿಯಿಂದ ಬೃಹತ್ ಪ್ರತಿಭಟನೆ



ಔರಾದ್,ಸೆ.15-

ಕಮಲನಗರ್ ಹಾಗೂ ಔರಾದ್ ತಾಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸುವಂತೆ ಆಗ್ರಹಿಸಿ ಹಾಗೂ ರಾಜ್ಯ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗಳನ್ನು ಖಂಡಿಸಿ ಸೆಪ್ಟೆಂಬರ್ 19ರಂದು ಔರಾದ್ ಪಟ್ಟಣದಲ್ಲಿ ಬಿಜೆಪಿ ಔರಾದ್ ಮಂಡಲದ ವತಿಯಿಂದ ಬೃಹತ್ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ.

ಶಾಸಕ ಪ್ರಭು ಚವ್ಹಾಣ ಅವರ ನೇತೃತ್ವದಲ್ಲಿ ರವಿವಾರ ನಡೆದ ಸಭೆಯಲ್ಲಿ ಮುಖಂಡರು ಮತ್ತು ಕಾರ್ಯಕರ್ತರು ಪ್ರತಿಭಟನೆಯ ರೂಪುರೇಷೆಗಳ ಕುರಿತು ಸುದೀರ್ಘ ಚರ್ಚೆ ನಡೆಸಿ ವಿವಿಧ ಸಲಹೆಗಳನ್ನು ನೀಡಿದರು.

ಪ್ರತಿಭಟನೆಗೆ ಔರಾದ್ ಪಟ್ಟಣದ ಅಮರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಲಾಗುವುದು. ಬಳಿಕ ಬಿಜೆಪಿ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ರೈತರೊಂದಿಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಎಪಿಎಂಸಿ ವೃತ್ತದವರೆಗೆ ತೆರಳಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾಗುವುದು ಎಂದು ಸಭೆಯಲ್ಲಿ ನಿರ್ಧರಿಸಲಾಯಿತು.

ಈ ವೇಳೆ ಮಾತನಾಡಿದ ಶಾಸಕ ಪ್ರಭು ಚವ್ಹಾಣ, ಔರಾದ್ ಹಾಗೂ ಕಮಲನಗರ್ ತಾಲೂಕುಗಳಲ್ಲಿ ಮಳೆ ಕೊರತೆಯಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮುಂಗಾರು ಹಂಗಾಮಿನಲ್ಲಿ ಸಮರ್ಪಕ ಮಳೆಯಾಗದೆ ಬೆಳೆಗಳು ಹಾನಿಗೊಳಗಾಗಿದ್ದು, ರೈತರು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಹಲವು ಬಾರಿ ಸರ್ಕಾರದ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಳ್ಳದಿರುವುದು ರೈತರಿಗೆ ಅನ್ಯಾಯವಾಗಿದೆ ಎಂದು ಆರೋಪಿಸಿದರು.

ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವ ಸರ್ಕಾರ ಪಹಣಿ ತಿದ್ದುಪಡಿ, ಮ್ಯುಟೇಷನ್ ಸೇರಿದಂತೆ ಹಲವು ಸೇವೆಗಳ ಶುಲ್ಕ ಹೆಚ್ಚಿಸಿ ರೈತರು ಮತ್ತು ಸಾಮಾನ್ಯ ಜನರ ಮೇಲೆ ಹೆಚ್ಚುವರಿ ಹೊರೆ ಹಾಕಿದೆ. ಸಾವಿರಾರು ರೇಷನ್ ಕಾರ್ಡ್‌ಗಳನ್ನು ರದ್ದುಪಡಿಸಿ ಬಡ ಕುಟುಂಬಗಳಿಗೆ ತೊಂದರೆ ನೀಡಲಾಗಿದೆ. ವೃದ್ಧಾಪ್ಯ ವೇತನ ಸೇರಿದಂತೆ ಸಾಮಾಜಿಕ ಭದ್ರತಾ ಯೋಜನೆಗಳಲ್ಲೂ ಸಮಸ್ಯೆಗಳು ಉಂಟಾಗಿವೆ ಎಂದು ಅವರು ಟೀಕಿಸಿದರು.

ಕ್ಷೇತ್ರದ ಅಭಿವೃದ್ಧಿಗೆ ಸಂಬಂಧಿಸಿದ 560 ಕೋಟಿ ರೂ. ವೆಚ್ಚದ ಕೆರೆ ತುಂಬಿಸುವ ಯೋಜನೆ ಹಾಗೂ ಕಾರಂಜಾ ಜಲಾಶಯ ದಿಂದ ನೀರು ಸರಬರಾಜು ಯೋಜನೆ ಸೇರಿದಂತೆ ಹಲವು ಕಾಮಗಾರಿಗಳನ್ನು ಸರ್ಕಾರ ಉದ್ದೇಶಪೂರ್ವಕವಾಗಿ ವಿಳಂಬಗೊಳಿಸುತ್ತಿದೆ ಎಂದು ಆರೋಪಿಸಿದ ಅವರು, ರೈತರ ಹಿತಾಸಕ್ತಿಗಾಗಿ ಸೆ.19ರ ಪ್ರತಿಭಟನೆಯನ್ನು ಬೃಹತ್ ಹೋರಾಟವನ್ನಾಗಿ ರೂಪಿಸಲಾಗುವುದು ಎಂದರು.

ಔರಾದ್ ಹಾಗೂ ಕಮಲನಗರ್ ತಾಲೂಕಿನ ಬಿಜೆಪಿ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು, ರೈತರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಪ್ರತಿಭಟನೆಯನ್ನು ಯಶಸ್ವಿಗೊಳಿಸಬೇಕು ಎಂದು ಶಾಸಕ ಪ್ರಭು ಚವ್ಹಾಣ ಕರೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕಿರಣ್ ಪಾಟೀಲ್, ರಾಮಶೆಟ್ಟಿ ಪನ್ನಾಳೆ, ರಂಗರಾವ್ ಜಾಧವ್, ಶಿವರಾಜ್ ಅಲ್ಮಾಜೆ, ಶಿವಾಜಿರಾವ್ ಪಾಟೀಲ್ ಮುಂಗನಾಳ್, ಶಿವಾಜಿರಾವ್ ಕಾಳೆ, ಸತೀಷ್ ಪಾಟೀಲ್, ಧೊಂಡಿಬಾ ನರೋಟೆ, ಬಾಬುರಾವ್ ತೋರ್ಣಾವಾಡಿ, ಪ್ರವೀಣ್ ಕಾರಬಾರಿ, ಖಂಡೋಬಾ ಕಂಗಟೆ, ಬಂಟಿ ರಾಂಪೂರೆ, ರಾಜಕುಮಾರ್ ಸೋರಾಳೆ, ಉದಯ್ ಸೋಲಾಪೂರೆ, ಸಂಜು ಮುರ್ಕೆ, ಸಚಿನ್ ಬಿರಾದಾರ್ ರವೀಂದ್ರರೆಡ್ಡಿ, ಪ್ರಕಾಶ್ ಮೇತ್ರೆ, ವಿಜಯಕುಮಾರ್ ದೇಶಮುಖ, ಗುಂಡಪ್ಪ ಬಿರಾದಾರ್ ರಮೇಶ್ ಪಾಟೀಲ್, ದೇವಾನಂದ್ ಪಾಟೀಲ್, ಪ್ರಭುರಾವ್ ಜೀರ್ಗೆ, ಪ್ರದೀಪ್ ಪವಾರ್ ಕೇರಬಾ ಪವಾರ್ ಪ್ರಕಾಶ್ ಅಲ್ಮಾಜೆ ಹಾಗೂ ಬಸವರಾಜ್ ಹಳ್ಳೆ ಸೇರಿದಂತೆ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಪಾರದರ್ಶಕ ಆಡಳಿತಕ್ಕಾಗಿ ಪ್ರಜಾ ಸೇವಾ ಆಂದೋಲನ: ತಹಶೀಲ್ದಾರ್ ನಾಗಯ್ಯ ಹಿರೇಮಠ



ವಾಡಿ,ಸೆ.15-

ಜನರ ಬಳಿಗೆ ಜನಪರ ಆಡಳಿತವನ್ನು ಕೊಂಡೊಯ್ಯುವ ಹಾಗೂ ಸರ್ಕಾರಿ ಆಡಳಿತದಲ್ಲಿ ಪಾರದರ್ಶಕತೆ ಕಾಪಾಡುವ ಉದ್ದೇಶದಿಂದ ರಾಜ್ಯ ಸರ್ಕಾರ ಪ್ರಜಾಸೇವಾ ಆಂದೋಲನ ಜಾರಿಗೊಳಿಸಿದೆ ಎಂದು ಚಿತ್ತಾಪುರ ತಹಶೀಲ್ದಾರ್ ನಾಗಯ್ಯ ಹಿರೇಮಠ ಹೇಳಿದರು.

ತಾಲೂಕಿನ ನಾಲವಾರ ಗ್ರಾಮದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತ ವತಿಯಿಂದ ಆಯೋಜಿಸಿದ್ದ ಹೋಬಳಿ ಮಟ್ಟದ ಪ್ರಜಾಸೇವಾ ಆಂದೋಲನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಾರ್ವಜನಿಕರ ಕುಂದುಕೊರತೆಗಳನ್ನು ಆಲಿಸಿ ಪರಿಹರಿಸುವುದು ಹಾಗೂ ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ನಿಗದಿತ ಸಮಯದಲ್ಲಿ ತಲುಪಿಸುವುದೇ ಈ ಅಭಿಯಾನದ ಪ್ರಮುಖ ಉದ್ದೇಶವಾಗಿದೆ ಎಂದರು.

ಪ್ರತಿ ತಿಂಗಳು ನಿಗದಿತ ದಿನ ಮತ್ತು ನಿಗದಿತ ಸ್ಥಳದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ, ಸಾಧ್ಯವಾದಷ್ಟು ಸ್ಥಳದಲ್ಲೇ ಪರಿಹಾರ ಕಲ್ಪಿಸಲಿದ್ದಾರೆ. ಸಾರ್ವಜನಿಕರು ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದರೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುತ್ತಾರೆ ಎಂದು ತಿಳಿಸಿದರು.

ಬೆಳಿಗ್ಗೆ 11ರಿಂದ ಮಧ್ಯಾಹ್ನ 3 ಗಂಟೆಯವರೆಗೆ ನಡೆದ ಪ್ರಜಾಸೇವಾ ಆಂದೋಲನದಲ್ಲಿ ಸಾರ್ವಜನಿಕರಿಂದ ಒಟ್ಟು 152 ಅರ್ಜಿಗಳು ಸ್ವೀಕರಿಸಲಾಯಿತು. ಇದರಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ ವಿವಿಧ ಪಿಂಚಣಿ ಯೋಜನೆಗಳಿಗಾಗಿ 129 ಅರ್ಜಿಗಳು ಸಲ್ಲಿಕೆಯಾಗಿರುವುದು ಗಮನಾರ್ಹವಾಗಿದೆ. ಇದೇ ವೇಳೆ ತಾಲೂಕು ಪಂಚಾಯಿತಿಗೆ ಸಂಬಂಧಿಸಿದ 9 ಅರ್ಜಿಗಳು, ಆಹಾರ ಇಲಾಖೆಗೆ 3 ಅರ್ಜಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದ 1 ಅರ್ಜಿ ಸ್ವೀಕರಿಸಲಾಗಿದೆ ಎಂದು ತಾಲೂಕು ಆಡಳಿತ ತಿಳಿಸಿದೆ. ಕಾರ್ಯಕ್ರಮದಲ್ಲಿ ಕೃಷಿ, ಉಪನೋಂದಣಿ, ಆಹಾರ, ಶಿಕ್ಷಣ, ಕಂದಾಯ, ಕೃಷಿ ಉತ್ಪನ್ನ ಮಾರು ಕಟ್ಟೆ, ಹಿಂದುಳಿದ ವರ್ಗಗಳ ಕಲ್ಯಾಣ, ಅಬಕಾರಿ, ಜೆಸ್ಕಾಂ, ಅರಣ್ಯ, ಕಾರ್ಮಿಕ ಹಾಗೂ ಭೂಮಾಪನ ಸೇರಿದಂತೆ ವಿವಿಧ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ತಾಲೂಕು ಕಾರ್ಯನಿರ್ವಾಹಕ ಅಧಿಕಾರಿ ಅಕ್ರಮ್ ಪಾಶಾ, ಚಿತ್ತಾಪುರ ಅಬಕಾರಿ ಇಲಾಖೆಯ ಪಿಎಸ್‌ಐ ವನಿತಾ ಎಸ್., ಶ್ರೀಮಂತ ಸಂಗಾವಿ, ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ರಾಜಕುಮಾರ, ಮುಖಂಡರಾದ ಶಿವರೆಡ್ಡಿ ಗೌಡ ಹಾಗೂ ಶರಣಪ್ಪ ಗೌಡ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ನಿವೃತ್ತರ ಅನುಭವ ಯುವಪೀಳಿಗೆಗೆ ದಾರಿದೀಪ: ವಿಜಯಕುಮಾರ ಪಾಟೀಲ



ಕಲಬುರಗಿ,ಸೆ.15-

ಕನ್ನಡದ ಮನಸ್ಸುಗಳನ್ನು ಒಂದುಗೂಡಿಸುವ ಮಹತ್ತರ ಕಾರ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು ಮಾಡುತ್ತಿದೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿಜಯಕುಮಾರ ಪಾಟೀಲ ತೇಗಲತಿಪ್ಪಿ ಹೇಳಿದರು.

ನಗರದ ಕನ್ನಡ ಭವನದ ಸುವರ್ಣ ಸಭಾಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಇತ್ತೀಚೆಗೆ ನಿವೃತ್ತರಾದ ಶಿಕ್ಷಕರು ಹಾಗೂ ವಿವಿಧ ಇಲಾಖೆಗಳ ಆಯ್ದ ಅಧಿಕಾರಿಗಳಿಗಾಗಿ ರವಿವಾರ ಆಯೋಜಿಸಿದ್ದ ಹೃದಯಾಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ತಲುಪಿಸುವಲ್ಲಿ ನಿವೃತ್ತ ನೌಕರರು ಹಾಗೂ ಹಿರಿಯರ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಅವರ ಅನುಭವ ಮತ್ತು ಮಾರ್ಗದರ್ಶನ ಸಮಾಜಕ್ಕೆ ಅಮೂಲ್ಯ ಸಂಪತ್ತಾಗಿದೆ ಎಂದು ಹೇಳಿದರು.

ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಹಿರಿಯ ಸಾಮಾಜಿಕ ಚಿಂತಕ ಬಾಬುರಾವ ಜಮಾದಾರ, ಆಧುನಿಕ ಕಾಲಘಟ್ಟದಲ್ಲಿ ಸಮಾಜ ದಿಕ್ಕುತಪ್ಪುತ್ತಿರುವುದು ಹಾಗೂ ಮಾನವೀಯ ಮೌಲ್ಯಗಳು ಕುಸಿಯುತ್ತಿರುವುದು ಆತಂಕಕಾರಿ ಬೆಳವಣಿಗೆ ಎಂದರು.

ಇಂತಹ ಸಂದರ್ಭದಲ್ಲಿ ಹಿರಿಯ ನಾಗರಿಕರು ತಮ್ಮ ಅನುಭವ, ಜ್ಞಾನ ಮತ್ತು ಬದುಕಿನ ಮೌಲ್ಯಗಳನ್ನು ಯುವಜನತೆಗೆ ಹಂಚುವ ಮೂಲಕ ಉತ್ತಮ ಸಮಾಜ ನಿರ್ಮಾಣಕ್ಕೆ ಮಾರ್ಗದರ್ಶನ ನೀಡಬೇಕು ಎಂದು ಅವರು ಸಲಹೆ ನೀಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯ ರಾಜಕುಮಾರ ಬಿ. ಉದನೂರ, ಸಂಶೋಧಕ ಸಾಹಿತಿ ಮುಡುಬಿ ಗುಂಡೇರಾವ, ಪ್ರಾಧ್ಯಾಪಕಿ ಡಾ.ಸವಿತಾ ಬೋಳಶೆಟ್ಟಿ, ಪಾಲಿಕೆ ಮಾಜಿ ಸದಸ್ಯ ಶಿವಾನಂದ ಪಾಟೀಲ ಅಷ್ಟಗಿ, ಉದ್ಯಮಿ ರವಿ ಸರಸಂಬಿ, ಶಿಕ್ಷಕಿ ಸ್ನೇಹಾ ಕಟ್ಟಿಮನಿ, ಜಿಲ್ಲಾ ಕಸಾಪ ಕಾರ್ಯದರ್ಶಿ ಧರ್ಮಣ್ಣ ಎಚ್. ಧನ್ನಿ ಹಾಗೂ ಪ್ರಿಯಾಂಕಾ ಪಾಟೀಲ ಮಾತನಾಡಿದರು.

ನಿಜಲಿಂಗಪ್ಪ ಕೊರಳ್ಳಿ, ಹಣಮಂತರಾಯ ಗೋಳಸರ, ಕಾಡಸಿದ್ಧ ಜಮಶೆಟ್ಟಿ, ಗುರುಶಾಂತ ಆರ್. ಓಗಿ, ಮಲ್ಲಿಕಾರ್ಜುನ ಸಂಗೋಳಗಿ, ಶಿವಪುತ್ರ ಗುಡ್ಡದ, ಜಯಶ್ರೀ ಚೌಧರಿ, ಮಹಾದೇವ ಅಟ್ಟೂರ, ಪಂಪಣ್ಣ ಸಜ್ಜನ್ ಹೊನ್ನಕಿರಣಗಿ, ಶಿವಾನಂದ ಕೊಪ್ಪದ ಹಾಗೂ ವಿಜಯಕುಮಾರ ಸಿರಗಾಪೂರ ಅವರನ್ನು ಸತ್ಕರಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ರಾಜೇಂದ್ರ ಮಾಡಬೂಳ, ಗಣೇಶ ಚಿನ್ನಾಕಾರ, ದಿನೇಶ ಮದಕರಿ, ರಾಜಶೇಖರ ಚೌಧರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ವಡಗೇರಾವನ್ನು ಬರಪಟ್ಟಿಯಿಂದ ಕೈಬಿಟ್ಟರೆ ಹೋರಾಟ: ಸರ್ಕಾರಕ್ಕೆ ಸರ್ವ ಸಂಘಟನೆಗಳ ಎಚ್ಚರಿಕೆ

ವಡಗೇರಾ,ಸೆ.15-

ತಾಲೂಕಿನಲ್ಲಿ ಬರದ ಪರಿಸ್ಥಿತಿ ತೀವ್ರವಾಗಿದ್ದು, ವಡಗೇರಾ ತಾಲೂಕನ್ನು ಬರಪೀಡಿತ ತಾಲೂಕುಗಳ ಪಟ್ಟಿಯಿಂದ ಕೈಬಿಟ್ಟರೆ ರೈತರೊಂದಿಗೆ ಸೇರಿ ಸರ್ಕಾರದ ವಿರುದ್ಧ ಉಗ್ರ ಹೋರಾಟ ನಡೆಸಲಾಗುವುದು ಎಂದು ಸರ್ವ ಸಂಘಟನೆಗಳ ಒಕ್ಕೂಟ ಎಚ್ಚರಿಕೆ ನೀಡಿದೆ.

ಪಟ್ಟಣದಲ್ಲಿ ವಿವಿಧ ಸಂಘಟನೆಗಳ ಅಧ್ಯಕ್ಷರ ನೇತೃತ್ವದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಸರ್ವ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಶರಣು ಎಸ್. ಇಟಗಿ ಮಾತನಾಡಿ,

ಈ ವರ್ಷ ಮುಂಗಾರು ಮಳೆ ಸಂಪೂರ್ಣ ಕೈಕೊಟ್ಟ ಪರಿಣಾಮ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಹೇಳಿದರು.

ಮಳೆಯನ್ನು ನಂಬಿಕೊಂಡು ಸಾಲ ಮಾಡಿ ಬಿತ್ತನೆ ಮಾಡಿದ ರೈತರಿಗೆ ಮಳೆ ಕೈಕೊಟ್ಟ ಪರಿಣಾಮ ಬೆಳೆಗಳು ಒಣಗಿ ಹೋಗಿದ್ದು, ಕೃಷಿ ಸಂಪೂರ್ಣ ಹಾನಿಗೊಳಗಾಗಿದೆ. ಇದರಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ಕಂಗಾಲಾಗಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು.

ವಡಗೇರಾ ತಾಲೂಕಿನಲ್ಲಿ ಸಂಪೂರ್ಣ ಬರದ ಛಾಯೆ ಆವರಿಸಿದೆ. ರೈತರ ಸಂಕಷ್ಟಕ್ಕೆ ಸ್ಪಂದಿಸಬೇಕಾದ ಸರ್ಕಾರ ನಿರ್ಲಕ್ಷ್ಯ ವಹಿಸುತ್ತಿದ್ದು, ಸ್ಥಳೀಯ ಕೃಷಿ ಇಲಾಖೆ ಅಧಿಕಾರಿಗಳು ಹಾಗೂ ಜಿಲ್ಲಾಡಳಿತದ ವೈಫಲ್ಯದಿಂದ ತಾಲೂಕಿನ ರೈತರು ಬರ ಪರಿಹಾರದಿಂದ ವಂಚಿತರಾಗುವ ಭೀತಿ ಎದುರಾಗಿದೆ ಎಂದು ಆರೋಪಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರು ಸೆಪ್ಟೆಂಬರ್ 16ರಂದು ಯಾದಗಿರಿ ಜಿಲ್ಲೆಯ ಎಲ್ಲ ತಾಲೂಕುಗಳನ್ನು ಮೂರನೇ ಹಂತದ ಬರಪೀಡಿತ ತಾಲೂಕುಗಳ ಪಟ್ಟಿಯಲ್ಲಿ ಸೇರಿಸಿ ಪರಿಹಾರ ನೀಡುವುದಾಗಿ ಭರವಸೆ ನೀಡಿದ್ದಾರೆ. ಅದರಂತೆ ವಡಗೇರಾ ತಾಲೂಕನ್ನೂ ಬರಪಟ್ಟಿಯಲ್ಲಿ ಸೇರಿಸಿ ರೈತರಿಗೆ ಸೂಕ್ತ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಒಂದನೇಯ ಪುಟದಿಂದ

ನಾನಷ್ಟೇ ಎಂಬುದು ಏಕಚಕ್ರಾಧಿಪತ್ಯ, ನಾವಷ್ಟೇ ಎಂಬುದು ತಾರತಮ್ಯ, ನಾವೆಲ್ಲರೂ ಎಂಬುದು ಮಾತ್ರ ಪ್ರಜಾಪ್ರಭುತ್ವ- ಡಾ.ಕರಿಗೂಳಿ

ದೇವರಾಜ, ಬಾಲಚಂದ್ರಪ್ಪ,ಈಶಪ್ಪ, ಕಲ್ಪನಾ, ರವಿಕುಮ್ಮಾರ್, ರೋಜಾ, ಮಾರೆಪ್ಪ, ವಿನಯಕುಮಾರ, ಕನಕಪ್ಪ, ಆಡಳಿತ ಸಿಬ್ಬಂದಿಯವರಾದ ಜಬೀನಾ ಬೇಗಂ,ಸಹಾಯಕ ಸಿಬ್ಬಂದಿಯಾದ ಶಾಂತಿ, ಶರಣಬಸವ ಹಾಗೂ ಕಾಲೇಜಿನ ಎಲ್ಲಾ ವಿದ್ಯಾರ್ಥಿಗಳು ಹಾಜರಿದ್ದರು.

ದಲಿತರ ಅತ್ಯಾಚಾರ ಕೊಲೆ ಪ್ರಕರಣ ಸಿಐಡಿ ತನಿಖೆಗೆ ಒಳಪಡಿಸಿ

ದೇವದುರ್ಗ, ಸಿರವಾರ, ಮಾನ್ವಿ ತಾಲೂಕು ಹೋರಾಟಗಾರರಿಗೆ ಬೆದರಿಕೆ ಇದ್ದು ತಮ್ಮ ಪ್ರಾಣ ರಕ್ಷಣೆಗೆ ಆಯುಧಗಳನ್ನು ಹೊಂದಲು ಪರವಾನಗಿ ನೀಡಬೇಕು ಎಂದು ಒತ್ತಾಯಿಸಿದರು.

ಸೆ.14ರಂದು ದಲಿತ ಮುಖಂಡರ ಸಭೆ ನಡೆದಿದ್ದು, ಸೆ.17 ರಂದು ದಲಿತರ ರಕ್ಷಣೆಗೆ ಪ್ರತ್ಯೇಕ ರೆಜಿಮೆಂಟ್ ಸ್ಥಾಪಿಸಲು ಸರ್ಕಾರ ಅನುನತಿ ನೀಡಬೇಕು. ಜಿಲ್ಲೆಯ ಸಮಗ್ರ ಅಭಿವೃದ್ಧಿ ಗಾಗಿ ಸ್ಥಳೀಯರನ್ನೇ ಸಚುವ ಸ್ಥಾನ ನೀಡಿ ಉಸ್ತುವಾರಿ ನೀಡಬೇಕು ಎಂದು ತೀರ್ಮಾನಿಸಿದ್ದು ರಾಯಚೂರಿನಲ್ಲಿ ಅನಿರ್ಧಿಷ್ಟಾವಧಿ ಧರಣಿ ನಡೆಸಲಾಗುವುದು ಎಂದು ತಿಳಿಸಿದರು.

ಜಿಲ್ಲಾಧಿಕಾರಿ, ಎಸ್ ಪಿ ಅವರಿಗೆ ವರ್ಗಾವಣೆ ಮಾಡಿ: ದಲಿತರ ಕೊಲೆ,ಅತ್ಯಾಚಾರ ಪ್ರಕರಣಗಳ ತನಿಖೆ ನಡೆಸಲು, ರಕ್ಷಣೆ ನೀಡಲು ವಿಫಲರಾದ ಜಿಲ್ಲಾಧಿಕಾರಿ ಪೂವಿತಾ ಎಸ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶುಗಿರಿ ಅವರನ್ನು ವಜಾ ಮಾಡಬೇಕು ಎಂದು ಆಗ್ರಹಿಸಿದರು. ಹೋರಾಟಗಾರ ರವೀಂದ್ರನಾಥ್ ಪಟ್ಟಿ, ಹೇಮರಾಜ ಅಸ್ಕಿಹಾಳ, ವಿಶ್ವನಾಥ ಪಟ್ಟಿ, ಆಂಜನೇಯ ಕುರುಬದೊಡ್ಡಿ ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಛಲವಾದಿ ಮಹಾಸಭಾದ 2025-26ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆ: ಸೆ.20ರಂದು

ಗಳಿಗೆ ಅಗತ್ಯ ಮಾರ್ಗದರ್ಶನ ಹಾಗೂ ಶೈಕ್ಷಣಿಕ ನೆರವು ಒದಗಿಸುವ ಮೂಲಕ ಸರ್ಕಾರಿ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಮುದಾಯದ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಪ್ರವೇಶಿಸುವಂತೆ ಪ್ರೋತ್ಸಾ ಹಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧ್ಯಕ್ಷ ವಿಶ್ವನಾಥ ಪಟ್ಟಿ, ಬಾಬು, ವಕೀಲ ತಮ್ಮಣ್ಣ, ಚಿನ್ನರಾಯುಡು, ಪುಷ್ಪರಾಜ್, ಪಾರ್ಥಸಾರಥಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸತೀಶ್ ಜಾರಕಿಹೊಳಿ ಮೇಲಿನ ಇ.ಡಿ ದಾಳಿ ಖಂಡಿಸಿ ಪಂಜಿನ ಮೆರವಣಿಗೆ

ಎಂದಿಗೂ ಸಫಲವಾಗುವುದಿಲ್ಲ ಎಂದು ಎಚ್ಚರಿಸಿದರು.

ಈ ಪಂಜಿನ ಮೇರವಣಿಗೆಯಲ್ಲಿ ಬಸವರಾಜ ದಳಪತಿ, ಅಮರೇಶ ಮುರ್ಕಿಗುಡ್ಡ, ಮಾನವ ಬಂಧುತ್ವ ವೇದಿಕೆಯ ತಾಲೂಕು ಸಂಚಾಲಕ ಮೆಶಾಕ್ ದೊಡ್ಡಮನಿ ಶಂಕ್ರಣ್ಣ, ಶಿವರಾಜ, ರಂಗನಾಥ ಜಾಲಾಪುರ, ಗೋಪಿ ಹೊಸಮನೆ, ಜೈರಾಜ್, ನಾಗರಾಜ, ಗುರು, ಬಸವ, ರಮೇಶ, ರವಿ ಮಲ್ಲಟ, ಹನಮಂತ ದೋಣಮರಡಿ, ಸಾಬಣ್ಣ ಹುಣಿಚೆಡ,ರಫಿ, ಮಾರೆಪ್ಪ ಬಲ್ಲಟಗಿ , ನಾಗರಾಜ ಗೊಲದಿನ್ನಿ, ಹನಮಂತ, ರಾಜಪ್ಪ ಪಟಕನದೊಡ್ಡಿ, ಉಮರ್ ಮಂಜ ಮರಾಟ, ದೇವು, ಅಮರೇಶ ನುಗಡೋಣಿ, ಮಲ್ಲಿಕಾರ್ಜುನ, ಅಕ್ಟರ್ ಸಾಬಣ್ಣ, ರಹೀಮ, ಮನ್ಸೂರ, ನಾಸಿರ, ಉಪ್ಪಿ, ಮಾರ್ಕ್ ಸೇರಿದಂತೆ ನೂರಾರು ಕಾರ್ಯಕರ್ತರು ಭಾಗವಹಿಸಿದ್ದರು.,

ಕೆಕೆಆರ್‌ಡಿಬಿ ಉದ್ದೇಶವೇ ವಿಫಲ: ಅಸಮತೋಲನ ನಿವಾರಣೆಯಾಗಿಲ್ಲ

ನಿರ್ಮಾಣವಾಗಿದೆ ಎಂದು ದೂರಿದರು.

ಈ ಭಾಗದಲ್ಲಿ ಶಿಕ್ಷಕರಿಲ್ಲದ ಶಾಲೆಗಳು, ವೈದ್ಯರು ಮತ್ತು ಸಿಬ್ಬಂದಿಯಿಲ್ಲದ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಪ್ರಾಧ್ಯಾಪಕರ ಕೊರತೆಯಿರುವ ವಿಶ್ವವಿದ್ಯಾಲಯಗಳು ಹಾಗೂ ಎಂಜಿನಿಯರ್‌ಗಳ ಕೊರತೆಯಿಂದ ಬಳಲುತ್ತಿರುವ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಗಳು ಇರುವುದು ಅಭಿವೃದ್ಧಿಯ ವೈಫಲ್ಯಕ್ಕೆ ಸಾಕ್ಷಿಯಾಗಿದೆ ಎಂದರು.

ಸೆ.17ಕ್ಕೆ ಕಲಬುರಗಿಯಲ್ಲಿ ಬೃಹತ್ ಸಮಾವೇಶ

ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಸರ್ಕಾರದ ಮೇಲೆ ಒತ್ತಡ ಹೇರುವ ಉದ್ದೇಶದಿಂದ ಸೆ.17ರಂದು ಕಲಬುರಗಿಯ ಶ್ರೀ ಶರಣಬಸವೇಶ್ವರ ವಿಶ್ವವಿದ್ಯಾಲಯದ ದೊಡ್ಡ ಬಸವಪ್ಪ ಅಪ್ಪ ಸಭಾಮಂಟಪದಲ್ಲಿ ಪ್ರಾದೇಶಿಕ ಅಸಮತೋಲನಾ ನಿವಾರಣಾ ಸಂಕಲ್ಪ ಸಮಾವೇಶ ಆಯೋಜಿಸಲಾಗಿದೆ. ವಿದ್ಯಾರ್ಥಿ-ಯುವಜನರು, ರೈತರು, ಕಾರ್ಮಿಕರು, ದಲಿತರು, ಅಲ್ಪಸಂಖ್ಯಾತರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಅಭಿವೃದ್ಧಿಗಾಗಿ ಸಂಕಲ್ಪ ಮಾಡಬೇಕು ಎಂದು ಕರೆ ನೀಡಿದರು.

ಕೃಷ್ಣಾ ನದಿಯ 700 ಟಿಎಂಸಿ ನೀರಿನ ಹಂಚಿಕೆ ಕುರಿತು ಕೇಂದ್ರ ಸರ್ಕಾರ ಗೆಜೆಟ್ ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಂಡು, ಕಲ್ಯಾಣ ಕರ್ನಾಟಕದ ಸುಮಾರು 15 ಲಕ್ಷ ಎಕರೆ ಭೂಮಿಗೆ ನೀರಾವರಿ ಕಲ್ಪಿಸಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ತರಬೇಕು ಎಂದು ಆಗ್ರಹಿಸಿದರು.

ಕಲ್ಯಾಣ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ಅಗತ್ಯ ಬೋಧಕಬೋಧಕೇತರ ಸಿಬ್ಬಂದಿ ನೇಮಕ, ಪ್ರಯೋಗಾಲಯ, ಗ್ರಂಥಾಲಯ ಹಾಗೂ ವಸತಿ ನಿಲಯಗಳ ನಿರ್ಮಾಣ, ನಿರುದ್ಯೋಗಿ ಯುವಕರಿಗೆ ಕೌಶಲ್ಯಾಭಿವೃದ್ಧಿ ಯೋಜನೆ, ಹೈನುಗಾರಿಕೆಗೆ ವಿಶೇಷ ಪ್ರೋತ್ಸಾಹ ಹಾಗೂ ಬಳ್ಳಾರಿ ಜೀನ್ಸ್ ಉದ್ಯಮ ಬಲಪಡಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು. ಸಮಾವೇಶದ ಬಳಿಕ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದರು. ರೈತರ ಸಂಕಷ್ಟ: ಸಮಿತಿಯ ಅಧ್ಯಕ್ಷ ಚಾಮರಸ ಮಾಲಿ ಪಾಟೀಲ್ ಮಾತನಾಡಿ, ಮಳೆ ಕೊರತೆ ಹಾಗೂ ಹೆಚ್ಚುತ್ತಿರುವ ತಾಪಮಾನದಿಂದ ರೈತರ ಬೆಳೆ ಹಾನಿಯಾಗಿದ್ದು, ಕೇಂದ್ರರಾಜ್ಯ ಸರ್ಕಾರಗಳ ಯೋಜನೆಗಳು ಸಮರ್ಪಕವಾಗಿ ರೈತರಿಗೆ ತಲುಪುತ್ತಿಲ್ಲ. ಈ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತಿಸಬೇಕು ಎಂದು ಒತ್ತಾಯಿಸಿದರು. ಸೆ.20ರಿಂದ 22ರವರೆಗೆ ಬೆಂಗಳೂರಿನಲ್ಲಿ ಪರಿಸರ ಸತ್ಯಾಗ್ರಹ ನಡೆಯಲಿದ್ದು, ಪರಿಸರವಾದಿಗಳು, ವಿಜ್ಞಾನಿಗಳು ಹಾಗೂ ಪ್ರಗತಿಪರ ಚಿಂತಕರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಚಂದ್ರಶೇಖರ್ ಉದಯಸ್ವಾಮಿ, ಚನ್ನಬಸವ ಜಾನೇಕಲ್ ಹಾಗೂ ಕೆ.ಜಿ. ವಿರೇಶ್ ಉಪಸ್ಥಿತರಿದ್ದರು.

3 ವರ್ಷದ ಮಗುವಿನ ಮೇಲೆ ಗುಂಪಾಗಿ ದಾಳಿ

ಗೌಸ್ ಮುಲ್ಲಾ ಮಾತನಾಡಿ, ''ರಾಯಚೂರು ನಗರದಲ್ಲಿ ಬೀದಿ ನಾಯಿಗಳ ದಾಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದರೂ ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆ ಮೌನವಾಗಿರುವುದು ಏಕೆ? ಮೂರು ವರ್ಷದ ಮಗುವಿನ ಮೇಲೆಯೇ ದಾಳಿ ನಡೆದಿರುವಾಗ ಮತ್ತೊಂದು ದೊಡ್ಡ ಅನಾಹುತ ಸಂಭವಿಸುವವರೆಗೆ ಕಾಯದೆ ತಕ್ಷಣ ಕ್ರಮ ಕೈಗೊಳ್ಳಬೇಕು'' ಎಂದು ಆಗ್ರಹಿಸಿದ್ದಾರೆ.

ಆಕ್ರಮಣಕಾರಿ ನಾಯಿಗಳನ್ನು ತಕ್ಷಣ ನಿಯಂತ್ರಿಸುವುದರ ಜೊತೆಗೆ ಅಗತ್ಯ ಪ್ರದೇಶಗಳಲ್ಲಿ ಎಬಿಸಿ (ಬಂಧ್ಯೀಕರಣ) ಹಾಗೂ ಎಆರ್‌ವಿ (ರೇಬಿಸ್ ಲಸಿಕೆ) ಕಾರ್ಯಕ್ರಮಗಳನ್ನು ತ್ವರಿತವಾಗಿ ಕೈಗೊಳ್ಳಬೇಕು. ಕಸ ಹಾಗೂ ಮಾಂಸದ ತ್ಯಾಜ್ಯ ವಿಲೇವಾರಿ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

48 ಗಂಟೆಗಳ ಗಡುವು: ಮುಂದಿನ ಎರಡು ದಿನಗಳೊಳಗೆ ರಾಯಚೂರು ಮಹಾನಗರ ಪಾಲಿಕೆ ಪರಿಣಾಮಕಾರಿ ಕ್ರಮ ಕೈಗೊಳ್ಳದಿದ್ದರೆ ವಾರ್ಡ್ ನಿವಾಸಿಗಳೊಂದಿಗೆ ಪಾಲಿಕೆ ಕಚೇರಿ ಎದುರು ಪ್ರತಿಭಟನೆ ನಡೆಸುವುದಾಗಿ ಸಾರ್ವಜನಿಕರು ಎಚ್ಚರಿಸಿದ್ದಾರೆ. ಮುಂದಿನ ದಿನಗಳಲ್ಲಿ ಬೀದಿ ನಾಯಿಗಳ ದಾಳಿಯಿಂದ ಯಾವುದೇ ಅನಾಹುತ ಸಂಭವಿಸಿದರೆ ಸಂಬಂಧಿಸಿದ ಅಧಿಕಾರಿಗಳೇ ಹೊಣೆಗಾರರಾಗಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. ಮಗುವಿನ ಮೇಲೆ ನಡೆದ ದಾಳಿ ಎಚ್ಚರಿಕೆಯ ಗಂಟೆಯಾಗಿದ್ದು, ಇನ್ನಷ್ಟು ಜೀವಹಾನಿ ಸಂಭವಿಸುವ ಮುನ್ನ ಪಾಲಿಕೆ ಎಚ್ಚೆತ್ತುಕೊಳ್ಳಬೇಕಿದೆ.

ಸರ್ಕಾರದ ಮೌಲ್ಯಮಾಪನಕ್ಕೆ ಮುಂದಾದ ಕೈಕಮಾಂಡ್

ಬಿ.ಕೆ.ಹರಿಪ್ರಸಾದ್ ಅಸಮಾಧಾನ ಹೊಂದಿದ್ದಾರೆ. ಈ ನಿಟ್ಟಿನಲ್ಲಿ ಅವರ ಜೊತೆ ರಣದೀಪ್ ಸಿಂಗ್ ಸುರ್ಜೇವಾಲ ಚರ್ಚೆ ನಡೆಸಲಿದ್ದಾರೆ. ಮುಖ್ಯಮಂತ್ರಿಯವರ ಜೊತೆಗೂ ಮಾತುಕತೆಗಳು ನಡೆಯಲಿವೆ.

ಇದೇ ವೇಳೆ ಸಚಿವ ಸಂಪುಟದಲ್ಲಿ ಖಾಲಿಯಿರುವ 2 ಸ್ಥಾನಗಳಿಗೆ ನೇಮಕಾತಿ, ನಿಗಮ-ಮಂಡಳಿಗಳ ಅಧ್ಯಕ್ಷರ ಆಯ್ಕೆ ಹಾಗೂ ವಿಧಾನ ಪರಿಷತ್ತಿನಲ್ಲಿ ತೆರವಾಗಿರುವ 5 ಸ್ಥಾನಗಳಿಗೆ ಸದಸ್ಯೆಯರ ನಿಯೋಜನೆ ಸೇರಿದಂತೆ ಪ್ರಮುಖ ವಿಚಾರಗಳನ್ನು ರಣದೀಪ್ ಸಿಂಗ್ ಸುರ್ಜೇವಾಲ ಪ್ರಸ್ತಾಪಿಸಲಿದ್ದಾರೆ ಎಂದು ತಿಳಿದು ಬಂದಿದೆ.ನೂರು ಕಾಂಗ್ರೆಸ್ ಕಚೇರಿಗಳ ಉದ್ಘಾಟನೆಗೆ ಶಂಕುಸ್ಥಾಪನೆಗೂ ಸಮಯ ನಿಗದಿ ಕುರಿತು ಚರ್ಚೆಯಾಗಲಿದೆ.

ಬೆಳೆ ವಿಮೆ ವಿತರಣೆಯಲ್ಲಿ ಲೋಪ: ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಾಸಕ ಬಿ.ಆರ್.ಪಾಟೀಲ್ ಆಗ್ರಹ



ಕಲಬುರಗಿ,ಸೆ.15-

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ರೈತರಿಗೆ ಬೆಳೆ ವಿಮೆ ಹಣ ವಿತರಣೆಯಲ್ಲಿ ಹಲವು ಲೋಪದೋಷಗಳು ಕಂಡುಬಂದಿದ್ದು, ಅಧಿಕಾರಿಗಳು ಮಾರ್ಗ ಸೂಚಿಯಂತೆ ಕಾರ್ಯನಿರ್ವಹಿಸುತ್ತಿಲ್ಲ ಎಂದು ಆಳಂದ ಶಾಸಕ ಬಿ.ಆರ್. ಪಾಟೀಲ್ ಆರೋಪಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆಳಂದ ತಾಲೂಕಿನಲ್ಲಿ ಕೇವಲ ಮೂರು ಮಂದಿ ಕೃಷಿ ಅಧಿಕಾರಿಗಳಿದ್ದು, ಇಷ್ಟು ದೊಡ್ಡ ತಾಲೂಕಿಗೆ ಇದು ಸಾಕಾಗುವುದಿಲ್ಲ. ಅಧಿಕಾರಿಗಳ ಕೊರತೆಯಿಂದ ರೈತರಿಗೆ ಸಮರ್ಪಕ ಸೇವೆ ದೊರೆಯುತ್ತಿಲ್ಲ ಎಂದು ಹೇಳಿದರು.

ಗ್ರಾಮ ಲೆಕ್ಕಾಧಿಕಾರಿಗಳು ಸರಿಯಾಗಿ ಕೆಲಸ ಮಾಡದಿರುವ ಕಾರಣ ಅನೇಕ ರೈತರಿಗೆ ಬೆಳೆ ವಿಮೆ ಹಣ ಬಂದಿಲ್ಲ. ಆದರೆ, ಅವರ ತಪ್ಪನ್ನು ತಹಸೀಲ್ದಾರ್ ಸಮರ್ಥಿಸಿಕೊಳ್ಳುತ್ತಿರುವುದು ಸರಿಯಲ್ಲ. ಗ್ರಾಮಸಭೆಗಳನ್ನು ನಡೆಸಿ ರೈತರ ಸಮಸ್ಯೆಗಳನ್ನು ಆಲಿಸಿ ಪರಿಹಾರ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಆಳಂದ ತಾಲೂಕಿನಲ್ಲಿ ರೈತರು ಬೆಳೆ ವಿಮೆಯ ಬಗ್ಗೆ ಜಾಗೃತರಾಗಿದ್ದು, ಸ್ವಯಂಪ್ರೇರಣೆಯಿಂದ ವಿಮೆ ಪಾವತಿಸುತ್ತಾರೆ. ಈ ವರ್ಷ ಹಲವರು ಸಾಲ ಪಡೆದು ಬೀಜ ಖರೀದಿಸಿ ಬಿತ್ತನೆ ಮಾಡಿದ್ದು, ಈಗಾಗಲೇ ಸಾಲದ ಸುಳಿಯಲ್ಲಿ ಸಿಲುಕಿದ್ದಾರೆ. ಇಂತಹ ಸಂದರ್ಭದಲ್ಲಿ ಸಕಾಲಕ್ಕೆ ವಿಮೆ ಹಣ ಸಿಗದಿರುವುದು ಆತಂಕಕಾರಿ ಬೆಳವಣಿಗೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತರು ಮತ್ತು ವಿಮಾ ಕಂಪನಿಗಳ ನಡುವೆ ಮಧ್ಯವರ್ತಿಗಳು ತೊಂದರೆ ಉಂಟುಮಾಡುತ್ತಿದ್ದರೆ, ಅವರ ವಿರುದ್ಧ ಜಿಲ್ಲಾಧಿಕಾರಿಗಳು ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು. ವಿಮಾ ಕಂಪನಿಗಳು ಕೆಳಮಟ್ಟದ ಅಧಿಕಾರಿಗಳಿಗೆ ಐಫೋನ್ ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ನೀಡಿದ್ದರೂ, ಕೆಲವು ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಭ್ರಷ್ಟಾಚಾರದಿಂದ ರೈತರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆಯಡಿ ಸುಮಾರು 300 ಕೋಟಿ ರೂ. ವಿಮೆ ಮಂಜೂರಾಗಿದ್ದರೂ, ಸಂಪೂರ್ಣ ಮೊತ್ತ ರೈತರಿಗೆ ತಲುಪಿಲ್ಲ ಎಂದು ಅವರು ಹೇಳಿದರು.

ತಾಲೂಕಿನ ಹಡಲಗಿ ಗ್ರಾಮದಲ್ಲಿ ಬೆಳೆ ವಿಮೆ ಕ್ಲೇಮ್ ಆಗಿದ್ದರೆ, ಯಳಸಂಗಿ ಗ್ರಾಮದಲ್ಲಿ ಕ್ಲೇಮ್ ಆಗಿಲ್ಲ. ಒಂದೇ ರೀತಿಯ ಪರಿಸ್ಥಿತಿಯಲ್ಲಿರುವ ಗ್ರಾಮಗಳಲ್ಲಿ ವಿಮೆ ವಿತರಣೆಯಲ್ಲಿ ವ್ಯತ್ಯಾಸ ಏಕೆ ಉಂಟಾಗಿದೆ ಎಂಬುದನ್ನು ಪರಿಶೀಲಿಸಬೇಕು ಎಂದು ಆಗ್ರಹಿಸಿದರು.

ವಿಮಾ ವಿತರಣೆಯಲ್ಲಿನ ಲೋಪದೋಷಗಳ ಕುರಿತು ಜಿಲ್ಲಾಧಿಕಾರಿಗಳು ಪುನರ್ ಪರಿಶೀಲನೆ ನಡೆಸುವುದಾಗಿ ತಿಳಿಸಿದ್ದರೂ, ಗ್ರಾಮ ಲೆಕ್ಕಾಧಿಕಾರಿಗಳನ್ನು ರಕ್ಷಿಸಲು ತಹಸೀಲ್ದಾರ್ ಮುಂದಾಗಿರುವ ಆರೋಪಗಳಿದ್ದು, ಇದರಿಂದ ಅಂತಿಮವಾಗಿ ರೈತರು ನಷ್ಟ ಅನುಭವಿಸುತ್ತಿದ್ದಾರೆ ಎಂದು ಹೇಳಿದರು.

ಕಳೆದ 30 ವರ್ಷಗಳಿಂದ ಕೃಷಿ ಇಲಾಖೆಯಲ್ಲಿ ಅಗತ್ಯ ಪ್ರಮಾಣದಲ್ಲಿ ಕೃಷಿ ಅಧಿಕಾರಿಗಳ ನೇಮಕಾತಿ ನಡೆದಿಲ್ಲ. ಇದರ ಪರಿಣಾಮ ಇಲಾಖೆಯ ಕಾರ್ಯನಿರ್ವಹಣೆಯ ಮೇಲೂ ಬಿದ್ದಿದೆ ಎಂದು ಶಾಸಕ ಬಿ.ಆರ್. ಪಾಟೀಲ್ ತಿಳಿಸಿದರು.

ಇ.ಡಿ. ದಾಳಿ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ''ಅಜಿತ್ ಪವಾರ್ ಸ್ವಂತ ಪಕ್ಷದಲ್ಲಿದ್ದಾಗ ಅಪರಾಧಿ, ಬಿಜೆಪಿಗೆ ಸೇರಿದಾಗ ನಿರಪರಾಧಿ ಎಂಬಂತಾಗಿದೆ'' ಎಂದು ಟೀಕಿಸಿದರು. ಕಾಂಗ್ರೆಸ್ ಪಕ್ಷದಲ್ಲಿ ತಾವು ಅತಿಥಿಯಂತೆ ಇದ್ದು, ಪಕ್ಷದ ಒಳಗಿನ ವಿಚಾರಗಳ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರು.

ಮುಖಂಡ ವೈಜನಾಥ ಝಳಕಿ ಮಾತನಾಡಿ, ಬೆಳೆ ವಿಮೆ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕೃಷಿ ಪದವೀಧರರನ್ನು ನೇಮಿಸಬೇಕು. ಕೆಲವೆಡೆ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಹತೆ ಹೊಂದಿರುವ ಸಿಬ್ಬಂದಿಯನ್ನು ಬಳಸಲಾಗುತ್ತಿದ್ದು, ಅವರಿಗೆ ಸೂಕ್ತ ತರಬೇತಿ ಇಲ್ಲದ ಕಾರಣ ರೈತರಿಗೆ ದೊರೆಯಬೇಕಾದ ವಿಮೆ ಹಣ ಸಮರ್ಪಕವಾಗಿ ತಲುಪುತ್ತಿಲ್ಲ ಎಂದು ಆರೋಪಿಸಿದರು.

ಒಂದೇ ಜಾತಿ, ಒಂದೇ ಧರ್ಮ, ಒಂದೇ ದೇವರು ಸಂದೇಶ ಸಾರಿದ ಮಹಾನ್ ಸಮಾಜ ಸುಧಾರಕ ನಾರಾಯಣ ಗುರು : ಕಾಶಿನಾಥ



ಚಿತ್ತಾಪುರ,ಸೆ.15-

ಮಾನವ ಕುಲಕ್ಕೆ ಒಂದೇ ಜಾತಿ, ಒಂದೇ ಧರ್ಮ ಮತ್ತು ಒಂದೇ ದೇವರು ಎಂಬ ಸಂದೇಶ ಸಾರಿದ ಬ್ರಹ್ಮಶ್ರೀ ನಾರಾಯಣ ಗುರು ಮಹಾನ್ ಸಮಾಜ ಸುಧಾರಕರಾಗಿದ್ದು, ಸಮಾನತೆ ಮತ್ತು ಸ್ವಾಭಿಮಾನದ ಹೋರಾಟಕ್ಕೆ ಹೊಸ ದಿಕ್ಕು ತೋರಿದ ಯುಗಪುರುಷರು ಎಂದು ಹಿರಿಯ ಪತ್ರಕರ್ತ ಕಾಶಿನಾಥ ಗುತ್ತೇದಾರ ಹೇಳಿದರು.

ಪಟ್ಟಣದ ರೇವಣಸಿದ್ದಪ್ಪ ಕಾಂತಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸ್ನಾತಕೋತ್ತರ ಮತ್ತು ಸಂಶೋಧನಾ ಕೇಂದ್ರ, ಸಾಂಸ್ಕೃತಿಕ ಘಟಕ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಆಯೋಜಿಸಿದ್ದ ಬ್ರಹ್ಮಶ್ರೀ ನಾರಾಯಣ ಗುರುಗಳ ಜಯಂತ್ಯೋತ್ಸವ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇವಾಲಯ ಪ್ರವೇಶಕ್ಕೆ ಅವಕಾಶ ನಿರಾಕರಿಸಲಾಗಿದ್ದ ಸಂದರ್ಭದಲ್ಲಿ ನಾರಾಯಣ ಗುರುಗಳು ತಾವೇ ದೇವಸ್ಥಾನಗಳನ್ನು ನಿರ್ಮಿಸಿ ಎಲ್ಲರಿಗೂ ಪೂಜೆಯ ಹಕ್ಕು ಕಲ್ಪಿಸಿದರು. ಕೇರಳದಲ್ಲಿ ಜಾರಿಯಲ್ಲಿದ್ದ ಅಸ್ಪೃಶ್ಯತೆ, ಮೂಢನಂಬಿಕೆ, ಕಂದಾಚಾರ ಮತ್ತು ಅನಿಷ್ಠ ಪದ್ಧತಿಗಳ ವಿರುದ್ಧ ಮೌನ ಕ್ರಾಂತಿಯ ಮೂಲಕ ಹೋರಾಡಿ ಸಾಮಾಜಿಕ ಪರಿವರ್ತನೆಗೆ ಮುನ್ನುಡಿ ಬರೆದರು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ. ಪದ್ಮಣ್ಣ ರಾಸಣಗಿ ಮಾತನಾಡಿ, ನಾರಾಯಣ ಗುರುಗಳು ಭಾರತದ ಶ್ರೇಷ್ಠ ಸಮಾಜ ಸುಧಾರಕರಲ್ಲಿ ಒಬ್ಬರು. ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆಯ ವಿರುದ್ಧ ಹೋರಾಡಿದ ಅವರು, ಸರ್ವರಿಗೂ ಸಮಾನತೆ, ಸ್ವಾಭಿಮಾನ ಮತ್ತು ಮಾನವೀಯತೆಯ ಸಂದೇಶ ಸಾರಿದರು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ರೋಹಿಣಿ ಕಲ್ಮಠ, ಡಾ.ಜ್ಯೋತಿ ಕುಲಕರ್ಣಿ, ಡಾ.ವಿಲಾಸ್, ಡಾ.ನಾಗವೇಣಿ, ಭಾಗ್ಯಶ್ರೀ ಠಾಕೂರ್ ಸೇರಿದಂತೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಸಾಂಸ್ಕೃತಿಕ ಘಟಕದ ಸಂಚಾಲಕ ಮಲ್ಲಪ್ಪ ಎಸ್.ತೊಟ್ನಳ್ಳಿ ಸ್ವಾಗತಿಸಿದರು. ಡಾ.ಸೂಗೂರೇಶ್ವರ ಪ್ರಾರ್ಥಿಸಿದರು, ಮರಿಯಪ್ಪ ಮೇತ್ರಿ ಕಾರ್ಯಕ್ರಮ ನಿರೂಪಿಸಿದರು ಹಾಗೂ ಶರಣಪ್ಪ ದಿಗ್ಗಾಂವ ವಂದಿಸಿದರು.



ಸ್ವಸ್ಥ ಸಮಾಜ ನಿರ್ಮಾಣಕ್ಕೆ ವಚನ ಸಾಹಿತ್ಯ ದಿವ್ಯೌಷಧಿ: ಡಾ.ಖಾಜಾವಲಿ ಈಚನಾಳ

ಜೇವರ್ಗಿ,ಸೆ.15-

ಶರಣರ ಚಳುವಳಿಯು ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಕ್ಷೇತ್ರಗಳಲ್ಲಿ ಆಮೂಲಾಗ್ರ ಬದಲಾವಣೆ ತಂದ ಮಹತ್ವದ ಚಳುವಳಿಯಾಗಿದೆ ಎಂದು ಗುಲ್ಬರ್ಗಾ ವಿಶ್ವವಿದ್ಯಾಲಯದ ಪದವಿ ಕಾಲೇಜುಗಳ ಕನ್ನಡ ಅಧ್ಯಾಪಕರ ಸಂಘದ ಅಧ್ಯಕ್ಷ ಡಾ. ಖಾಜಾವಲಿ ಈಚನಾಳ ಹೇಳಿದರು.

ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ಜೇವರ್ಗಿ ತಾಲೂಕು ಘಟಕ ಆಯೋಜಿಸಿದ್ದ 7ನೇ ಶರಣ ಸಾಹಿತ್ಯ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ವಚನ ಸಾಹಿತ್ಯದಲ್ಲಿ ಮಾನವೀಯತೆ, ಸಮಾನತೆ ಮತ್ತು ಉತ್ತಮ ಜೀವನ ಮೌಲ್ಯಗಳಿವೆ. ಸ್ವಸ್ಥ ಸಮಾಜ ನಿರ್ಮಾಣಕ್ಕೆ ವಚನ ಸಾಹಿತ್ಯ ದಿವ್ಯೌಷಧಿಯಾಗಿದೆ. ಬುದ್ಧ, ಬಸವ, ಅಂಬೇಡ್ಕರ್ ಹಾಗೂ ಗಾಂಧೀಜಿಯಂತಹ ಮಹಾಪುರುಷರ ಚಿಂತನೆಗಳು ಕೇವಲ ಭಾಷಣಗಳಿಗೆ ಸೀಮಿತವಾಗದೆ, ನಮ್ಮ ನಿತ್ಯ ಬದುಕಿನಲ್ಲಿ ಅಳವಡಿಕೆಯಾಗಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಸಮಾರೋಪ ಕಾರ್ಯಕ್ರಮದ ಸಾನಿಧ್ಯವನ್ನು ಡಾ. ಮ.ನಿ.ಪ್ರ. ಶಿವಾನಂದ ಮಹಾಸ್ವಾಮಿಗಳು ವಹಿಸಿದ್ದರು. ಶರಣ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷ ಚನ್ನಮಲ್ಲಯ್ಯ ಹಿರೇಮಠ ಅಧ್ಯಕ್ಷತೆ ವಹಿಸಿದ್ದರು.

ಶರಣ ಸಾಹಿತ್ಯ ಪರಿಷತ್ತು ಪ್ರಧಾನ ಕಾರ್ಯದರ್ಶಿ ಶಾಂತಲಿಂಗ ಪಾಟೀಲ್ ನಿರ್ಣಯ ಮಂಡಿಸಿದರು. ಮುಖ್ಯ ಅತಿಥಿಗಳಾಗಿ ಎಂ.ಎಸ್ ಹಿರೇಮಠ, ಸಂಗನಗೌಡ ಮಾಲಿಪಾಟೀಲ್, ಸಿದ್ದು ಬಿ ಅಂಗಡಿ, ನಿಂಗಣ್ಣ ಭಂಡಾರಿ, ಬಿ ಎಂ ಪಾಟೀಲ್ ಕಲ್ಲೂರ್ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಸ್. ಕೆ ಬಿರಾದಾರ, ಶ್ರೀ ಹರಿ ಕರ್ಕಿಹಳ್ಳಿ ಉಪಸ್ಥಿತರಿದ್ದರು. ಕವಿತಾ ಹಳ್ಳಿ ನಿರೂಪಿಸಿದರು. ಸಿದ್ರಾಮ ಕಟ್ಟಿ ಸ್ವಾಗತಿಸಿದರು. ಬಿ ಜಿ ಹೂಗಾರ ವಂದಿಸಿದರು.

ಸಮಾರೋಪ ಕಾರ್ಯಕ್ರಮದ ನಂತರ ಗಂಗಾವತಿ ಪ್ರಾಣೇಶ್ , ಬಸವರಾಜ್ ಮಹಾಮನಿ, ನರಸಿಂಹ ಜೋಶಿ ಹಾಸ್ಯ ಕಲಾವಿದರಿಂದ ನಗೆ ಹಬ್ಬ ನಡೆಯಿತು.



ಕುಡಿಯುವ ನೀರು ಪೂರೈಕೆಗೆ ಆಗ್ರಹಿಸಿ ಶಾಸಕಿ ನಿವಾಸದ ಮುಂದೆ ಪ್ರತಿಭಟನೆ

ಕಲಬುರಗಿ,ಸೆ.15-

ಸಮರ್ಪಕವಾಗಿ ಕುಡಿಯುವ ನೀರು ಪೂರೈಸುವಂತೆ ಆಗ್ರಹಿಸಿ ಕಲಬುರಗಿ ಉತ್ತರ ಮತಕ್ಷೇತ್ರದ ಶಾಸಕಿ ಖನೀಜ್ ಫಾತಿಮಾ ಅವರ ನಿವಾಸದ ಎದುರು ವಾರ್ಡ್ ನಂ.15ರ ನಿವಾಸಿಗಳು ರವಿವಾರ ಪ್ರತಿಭಟನೆ ನಡೆಸಿದರು.

ಬಡಾವಣೆಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಕೆಯಾಗುತ್ತಿಲ್ಲ. ನೀರಿನ ಸಮಸ್ಯೆಯಿಂದ ನಿವಾಸಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದು, ಕೂಡಲೇ ಸಮಸ್ಯೆ ಪರಿಹರಿಸಿ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳದಲ್ಲಿ ಕಾಂಗ್ರೆಸ್ ಪಕ್ಷದ ಮುಖಂಡರೂ ಸಾರ್ವಜನಿಕರ ಪರವಾಗಿ ಧ್ವನಿ ಎತ್ತಿ, ಬಡಾವಣೆಯ ನೀರಿನ ಸಮಸ್ಯೆ ಕುರಿತು ಅಸಮಾಧಾನ ವ್ಯಕ್ತಪಡಿಸಿದರು. ಈ ವೇಳೆ ಶಾಸಕಿ ಖನೀಜ್ ಫಾತಿಮಾ ಅವರ ಪುತ್ರನೊಂದಿಗೆ ಕೆಲಕಾಲ ಮಾತಿನ ಚಕಮಕಿ ನಡೆದಿದ್ದು, ಸ್ಥಳದಲ್ಲಿ ಕೆಲಕಾಲ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಯಿತು.

ನಿವಾಸಿಗಳು ಕುಡಿಯುವ ನೀರು ಸೇರಿದಂತೆ ಬಡಾವಣೆಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ತಕ್ಷಣ ಕಲ್ಪಿಸಬೇಕು. ಶಾಸಕಿ ಸ್ಥಳಕ್ಕೆ ಆಗಮಿಸಿ ತಮ್ಮ ಸಮಸ್ಯೆಗಳನ್ನು ಆಲಿಸಿ, ಶಾಶ್ವತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು.

ನಂತರ ಶಾಸಕಿ ಖನೀಜ್ ಫಾತಿಮಾ ಅವರ ಪುತ್ರ ಹಾಗೂ ಕಾಂಗ್ರೆಸ್ ಮುಖಂಡ ಫರಾಜ್ ಉಲ್ ಇಸ್ಲಾಂ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ನಿವಾಸಿಗಳೊಂದಿಗೆ ಚರ್ಚಿಸಿದರು. ಬಡಾವಣೆಯ ಕುಡಿಯುವ ನೀರು ಸೇರಿದಂತೆ ಮೂಲಭೂತ ಸಮಸ್ಯೆಗಳನ್ನು ಶೀಘ್ರದಲ್ಲೇ ಬಗೆಹರಿಸುವುದಾಗಿ ಭರವಸೆ ನೀಡಿದ ಬಳಿಕ ಪ್ರತಿಭಟನೆ ಮೊಟಕುಗೊಂಡಿತು.

ತಳವಾರರಿಗೆ ಎಸ್‌ಟಿ ಪ್ರಮಾಣ ಪತ್ರ ನೀಡದಿದ್ದರೆ ಹೋರಾಟ: ಶಿವಕುಮಾರ ನಾಟೀಕಾರ



ಅಫಜಲಪುರ,ಸೆ.15-

ನೈಜ ತಳವಾರ ಸಮುದಾಯದವರಿಗೆ ಪರಿಶಿಷ್ಟ ಪಂಗಡ (ಎಸ್‌ಟಿ) ಜಾತಿ ಪ್ರಮಾಣ ಪತ್ರ ಹಾಗೂ ಸಿಂಧುತ್ವ ಪ್ರಮಾಣ ಪತ್ರ ನೀಡುವಂತೆ ಆಗ್ರಹಿಸಿ, ಸೆಪ್ಟೆಂಬರ್ 17ರಂದು ಕಲಬುರಗಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಕಪ್ಪು ಬಾವುಟ ಪ್ರದರ್ಶಿಸಿ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ಜೆಡಿಎಸ್ ಹಿಂದುಳಿದ ವರ್ಗಗಳ ರಾಜ್ಯಾಧ್ಯಕ್ಷ ಶಿವಕುಮಾರ ನಾಟೀಕಾರ ಎಚ್ಚರಿಕೆ ನೀಡಿದರು.

ಪಟ್ಟಣದ ಶಾರದಾ ಕಲ್ಯಾಣ ಮಂಟಪದಲ್ಲಿ ನಡೆದ ತಳವಾರ ಸಮುದಾಯದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಇತರೆ ಜಿಲ್ಲೆಗಳಲ್ಲಿ ತಳವಾರ ಸಮುದಾಯದವರಿಗೆ ಎಸ್‌ಟಿ ಪ್ರಮಾಣ ಪತ್ರ ಹಾಗೂ ನೇಮಕಾತಿಗೆ ಅಗತ್ಯವಾದ ಜಾತಿ ಮತ್ತು ಸಿಂಧುತ್ವ ಪ್ರಮಾಣ ಪತ್ರ ನೀಡಲಾಗುತ್ತಿದೆ. ಆದರೆ ಕಲಬುರಗಿ ಜಿಲ್ಲೆಯಲ್ಲಿ ಮಾತ್ರ ಪ್ರಮಾಣ ಪತ್ರ ನೀಡುವಲ್ಲಿ ಗೊಂದಲ ಉಂಟಾಗಿರುವುದು ಏಕೆ ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

2014ರಲ್ಲಿ ನಡೆದ ಕುಲಶಾಸ್ತ್ರೀಯ ಅಧ್ಯಯನ ಹಾಗೂ 201011ರ ಜನಗಣತಿ ಪ್ರಕಾರ ಕಲಬುರಗಿ ಜಿಲ್ಲೆಯಲ್ಲಿ ತಳವಾರ ಸಮುದಾಯದ 28,800 ಜನಸಂಖ್ಯೆ ದಾಖಲಾಗಿದ್ದರೂ, ಪ್ರಮಾಣ ಪತ್ರ ನೀಡುವಲ್ಲಿ ವಿಳಂಬ ಮಾಡುತ್ತಿರುವುದು ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಆರೋಪಿಸಿದರು.


ಎಸ್‌ಟಿ ಪ್ರಮಾಣ ಪತ್ರ ಹಾಗೂ ಸಿಂಧುತ್ವಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ತಕ್ಷಣ ಬಗೆಹರಿಸಿ ಸಂವಿಧಾನಾತ್ಮಕ ಸೌಲಭ್ಯಗಳನ್ನು ಒದಗಿಸಬೇಕು. ಹೋರಾಟಗಾರರ ಮೇಲಿನ ಪ್ರಕರಣಗಳನ್ನು ಹಿಂಪಡೆಯಬೇಕು. ಸರ್ಕಾರ ನ್ಯಾಯ ಒದಗಿಸಿದರೆ ಮಾತ್ರ ಹೋರಾಟ ಕೈಬಿಡಲಾಗುವುದು ಎಂದು ಅವರು ಹೇಳಿದರು.

ಕಲಬುರಗಿ ಜಿಲ್ಲೆಯಲ್ಲಿ ತಳವಾರ ಸಮುದಾಯಕ್ಕೆ ಎಸ್‌ಟಿ ಪ್ರಮಾಣ ಪತ್ರ ನೀಡದಿರುವುದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರೇ ಹೊಣೆ ಎಂದು ಶಿವಕುಮಾರ ನಾಟೀಕಾರ ಆರೋಪಿಸಿದರು.

ಸಭೆಯಲ್ಲಿ ಹಿರಿಯ ಮುಖಂಡ ಶಂಕರ ಮ್ಯಾಕೇರಿ, ರಾಜಕುಮಾರ ಉಕ್ಕಲಿ, ಸರ್ದಾರ್ ರಾಯಪ್ಪ, ರೇವಣಸಿದ್ದಪ್ಪ ಕಮಾನಮನಿ, ಶರಣಗೌಡ ಪಾಟೀಲ್, ಸುಭಾಷ್ ಹಂಚನಾಳ, ಸಿದ್ದಪ್ಪ ಗುಡೇದ, ಪುಂಡರೀಕಾಕ್ಷ ಕಟ್ಟಿ, ಚಂದು ದೈತನ, ಚಂದಪ್ಪ ಹಾವಳಗಿ, ಮಡಿವಾಳಪ್ಪ ಕೋಣಸಿರಸಗಿ, ಮಹಾಂತೇಶ ಪಾಟೀಲ್, ಮರೆಪ್ಪ ಜಮಾದಾರ, ಸತೀಶ್ ಬಮನಳ್ಳಿ, ಬಸವರಾಜ ನಾಟೀಕಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಿಮ್ಮೂರು ಸುದ್ದಿ

ಸಂಪಾದಕೀಯ



ಪ್ರಜಾ ಸೇವೆ ಪ್ರಚಾರವೂ ಇರಲಿ, ಪ್ರಜೆಗಳ ಬದುಕಿನಲ್ಲಿ ಬದಲಾವಣೆಯನ್ನೂ ತರಲಿ

ಸರ್ಕಾರದ ಕಾರ್ಯಕ್ರಮಗಳು, ಯೋಜನೆಗಳು ಜನರಿಗೆ ತಲುಪಲು ಪ್ರಚಾರ ಮುಖ್ಯ; ಅದಕ್ಕಿಂತ ಸಾಮಾನ್ಯರ ಬದುಕಿನಲ್ಲಿ ಬದಲಾವಣೆ ತರುವುದು ಇನ್ನೂ ಮುಖ್ಯ. ಪ್ರಜಾ ಸೇವೆ ಎಂದರೆ ಅಧಿಕಾರದಲ್ಲಿರುವವರು ಜನರಿಗೆ ಮಾಡುವ ಉಪಕಾರವಲ್ಲ. ಜನ ನೀಡುವ ಅಧಿಕಾರವನ್ನು ಬಳಸಿಕೊಂಡು ಜನರ ಬದುಕನ್ನು ಸುಧಾರಿಸುವುದು.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸರ್ಕಾರ ನೂರು ದಿನ ಪೂರೈಸಿದ ಸಂದರ್ಭದಲ್ಲಿ ನಾನು ಮುಖ್ಯಮಂತ್ರಿಯಲ್ಲ ಪ್ರಜಾ ಸೇವಕ ಎಂದು ಘೋಷಿಸಿದರು. ಅದಕ್ಕೂ ಮುಂಚೆ ಸಾರ್ವಜನಿಕರ ದೂರುಗಳನ್ನು ಪರಿಹರಿಸಲು ಮತ್ತು ಆಡಳಿತವನ್ನು ಜನರ ಮನೆ ಬಾಗಿಲಿಗೆ ಕೊಂಡೊಯ್ಯಲು ನೂತನವಾಗಿ ಪ್ರಜಾ ಸೇವೆ ಇಲಾಖೆಯನ್ನು ಸ್ಥಾಪಿಸಿದರು.

ಅಂದರೆ, ಜನರು ಆಡಳಿತಗಾರರ ಬಳಿಗೆ ಹೋಗುವುದಕ್ಕೆ ಬದಲಾಗಿ, ಜನರು ಇರುವಲ್ಲಿಗೇ ಆಡಳಿತಗಾರರು ಹೋಗಲು; ಉತ್ತಮ ಆಡಳಿತ ಆರಂಭಗೊಳ್ಳುತ್ತದೆ ಎನ್ನುವುದಕ್ಕೆ ಸಾಂಸ್ಥಿಕ ಸ್ವರೂಪ ಕೊಡಲು ಪ್ರಜಾ ಸೇವೆ ಯೋಜನೆ ಮುಂದಾಗಿದೆ. ಸಕಾಲ ಯೋಜನೆ, ಜನಸ್ಪಂದನ, ಸಾರ್ವಜನಿಕ ಅಹವಾಲುಗಳ ವಿಭಾಗ ಮತ್ತು ಆಡಳಿತ ಸುಧಾರಣೆಗಳನ್ನು ಒಂದೇ ಇಲಾಖೆಯಡಿ ತರುವುದು ಪ್ರಜಾ ಸೇವೆಯ ಉದ್ದೇಶವಾಗಿದೆ. ನಿಗದಿತ ಶನಿವಾರದ ಸಭೆಗಳು, ವಾರದ ಪರಿಶೀಲನೆಗಳು ಹಾಗೂ ಅರ್ಜಿಗಳು ಕಡತಗಳಲ್ಲಿ ಹುದುಗಿಹೋಗದಂತೆ ನೋಡಿಕೊಳ್ಳುವ ವ್ಯವಸ್ಥೆ ಯೋಜನೆಯ ಭಾಗವಾಗಿದೆ.

ಈಗಾಗಲೇ ತಾಲ್ಲೂಕು ಮತ್ತು ಹೋಬಳಿ ಹಂತಗಳಲ್ಲಿ ಅಹವಾಲು ಸ್ವೀಕಾರ ಸಭೆಗಳು ನಡೆದಿವೆ. ಪ್ರಜಾ ಸೇವೆ ಇಲಾಖೆ ಆರಂಭವಾದ ಎರಡೇ ದಿನಗಳಲ್ಲಿ ಸುಮಾರು 26,387 ದೂರುಗಳು ಮತ್ತು ಮನವಿಗಳು ದಾಖಲಾಗಿವೆ. ಒಟ್ಟು ದೂರುಗಳ ಪೈಕಿ ಸರಿಸುಮಾರು 22,810 ದೂರುಗಳು ಕಂದಾಯ, ನಗರಾಭಿವೃದ್ಧಿ, ವಸತಿ, ಗ್ರಾಮೀಣಾಭಿವೃದ್ಧಿ ಮತ್ತು ಆಹಾರ ಇಲಾಖೆಗಳಿಗೆ ಸಂಬಂಧಿಸಿದ್ದಾಗಿವೆ. ಇವುಗಳಲ್ಲಿ ವೃದ್ಧಾಪ್ಯ ವೇತನ ಮತ್ತು ಪಡಿತರ ಚೀಟಿ (ರೇಷನ್ ಕಾರ್ಡ್) ತಿದ್ದುಪಡಿಗೆ ಸಂಬಂಧಿಸಿದ ದೂರುಗಳೇ ಹೆಚ್ಚಾಗಿವೆ.

ಇದು ಏನನ್ನು ಸೂಚಿಸುತ್ತದೆ? ಒಂದು, ನಾಗರಿಕರಿಗೆ ಸರ್ಕಾರಿ ಸೇವೆಗಳು ಸುಲಭಕ್ಕೆ ಸಿಗುತ್ತಿಲ್ಲ; ಮತ್ತೊಂದು ಸಿಕ್ಕರೂ ಅದು ಸಮಯ ಬೇಡುವ, ಲಂಚಕ್ಕೆ ಒತ್ತಾಯಿಸುವ ಸೇವೆಯಾಗಿರುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸರ್ಕಾರದ ಮೂಲ ಉದ್ದೇಶ ಪ್ರಜೆಗಳಿಗೆ ಸೇವೆ ಸಲ್ಲಿಸುವುದು, ಅವರ ಹಕ್ಕುಗಳನ್ನು ರಕ್ಷಿಸುವುದು ಮತ್ತು ಸಾರ್ವಜನಿಕ ಸಂಪನ್ಮೂಲಗಳನ್ನು ಜನರ ಕಲ್ಯಾಣಕ್ಕಾಗಿ ಬಳಸುವುದು. ಜನರಿಗೆ ಉತ್ತಮ ಶಿಕ್ಷಣ, ಸಾರ್ವಜನಿಕ ಆರೋಗ್ಯ, ಕುಡಿಯುವ ನೀರು, ರಸ್ತೆ, ಸಾರಿಗೆ, ಉದ್ಯೋಗಾವಕಾಶ, ಸಾಮಾಜಿಕ ಭದ್ರತೆ ಮತ್ತು ನ್ಯಾಯಯುತ ಆಡಳಿತ ದೊರಕಿಸುವುದೇ ಪ್ರಜಾ ಸೇವೆಯಾಗಿದೆ.

ಆ ನಿಟ್ಟಿನಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪ್ರಜಾ ಸೇವೆ ಉತ್ತಮ ನಡೆಯೇ ಆಗಿದೆ. ಆದರೆ, ಸಮಸ್ಯೆಗಳ ಪರಿಹಾರಕ್ಕಿಂತ ಪ್ರಚಾರವೇ ಹೆಚ್ಚಾಗಿದೆ ಎಂಬ ದೂರುಗಳೂ ಕೇಳಿಬರುತ್ತಿವೆ.

ಇಲ್ಲಿಯವರೆಗೆ ಬರೋಬ್ಬರಿ 26,387 ಅಹವಾಲುಗಳು ಸ್ವೀಕಾರವಾಗಿದ್ದು, ಕೇವಲ ಆರು ದಿನಗಳ ಅಂತರದಲ್ಲಿ 13,872 ಅರ್ಜಿಗಳನ್ನು ಯಶಸ್ವಿಯಾಗಿ ವಿಲೇವಾರಿ ಮಾಡಲಾಗಿದೆ. ಇದನ್ನು ಇನ್ನಷ್ಟು ಜನರಿಗೆ ಹತ್ತಿರವಾಗಿಸಲು ಅ. 2ರಂದು ನಮ್ಮ ಸೇವೆ ಆ್ಯಪ್ ಅನ್ನು ಸಹ ಬಿಡುಗಡೆ ಮಾಡಲು ಸರ್ಕಾರ ಮುಂದಾಗಿದೆ ಎಂದು ಪ್ರಜಾಸೇವಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತಾ ಮಾಹಿತಿ ನೀಡಿದ್ದಾರೆ.

ಆದರೆ, ಇದೇ ಸಂದರ್ಭದಲ್ಲಿ ದೂರು ಸಲ್ಲಿಸಿದ ಬೆಂಗಳೂರಿನ ನಾಗರಿಕರೊಬ್ಬರು, ಸಭೆಯಲ್ಲಿ ಅಧಿಕಾರಿಗಳು ನಾಗರಿಕರ ದೂರುಗಳಿಗೆ ಈ ಹಿಂದಿನಂತೆಯೇ ತಮ್ಮ ಹಂತದಲ್ಲಿ ಹಿಂಬರಹ ನೀಡಿ ಮುಕ್ತಾಯಗೊಳಿಸುತ್ತಿದ್ದಾರೆ. ಹಿಂಬರಹ ಪಡೆದು ಬಗೆಹರಿಯದ ಪ್ರಕರಣಗಳು ಪ್ರಜಾ ಸೇವೆ ಸಭೆಯಲ್ಲಿ ಚರ್ಚೆಗೆ ಬರುತ್ತವೆಯೇ ಎಂಬ ಬಗ್ಗೆ ಅಧಿಕಾರಿಗಳಿಗೂ ಮಾಹಿತಿಯಿಲ್ಲ. ಹಾಗಾದರೆ, ಸಮಸ್ಯೆಗೆ ಪರಿಹಾರ ಸಿಗುವುದಾದರೂ ಎಲ್ಲಿ? ಅಧಿಕಾರಿಗಳ ಮಟ್ಟದಲ್ಲೇ ಹಿಂಬರಹಕ್ಕೆ ಸೀಮಿತಗೊಳಿಸುವುದಾದರೆ ಪ್ರಜಾ ಸೇವೆಯೆಂದು ಪ್ರಚಾರ ಮಾಡುವ ಅವಶ್ಯಕತೆ ಏನಿತ್ತು? ಸಮಸ್ಯೆ ಬಗೆಹರಿಸುವುದು ಪ್ರಜಾ ಸೇವೆಯ ಉದ್ದೇಶವಾದರೆ, ಅಧಿಕಾರಿಗಳು ಬರೀ ಸಮಾಧಾನಕ್ಕೆ ನಿರ್ದೇಶನವನ್ನು ಅಪ್ಲೋಡ್ ಮಾಡಿ, ದೂರುಗಳನ್ನು ಮುಕ್ತಾಯ ಮಾಡುತ್ತಿರುವುದೇಕೆ ಎಂದು ಪ್ರಶ್ನಿಸಿದ್ದಾರೆ.

ಇದನ್ನು ಸೂಕ್ಷ್ಮವಾಗಿ ಗಮನಿಸಿದರೆ, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸರ್ಕಾರ, ಪ್ರಜಾ ಸೇವೆ ಎಂಬ ಇಲಾಖೆಯನ್ನು ಪ್ರಚಾರಕ್ಕಾಗಿ ಬಳಸಿಕೊಳ್ಳುತ್ತಿದೆಯೇ ಎಂಬ ಅನುಮಾನ ಉಂಟಾಗುತ್ತದೆ. ಅದಕ್ಕೆ ಪೂರಕವಾಗಿ ಕಾಂಗ್ರೆಸ್ ಸರ್ಕಾರವು ತನ್ನ ಇತ್ತೀಚಿನ ವಿವಿಧ ಯೋಜನೆಗಳು ಹಾಗೂ ಅಭಿಯಾನಗಳಿಗೆ ಸುಮಾರು 532 ಕೋಟಿಗೂ ಹೆಚ್ಚು ಹಣವನ್ನು ಜಾಹೀರಾತಿಗಾಗಿ ವೆಚ್ಚ ಮಾಡಿರುವುದು ಆ ಅನುಮಾನಕ್ಕೆ ಪುಷ್ಟಿ ನೀಡುತ್ತದೆ.

ಇನ್ನು ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕಾರ್ಯಶೈಲಿ- ಬರ ವೀಕ್ಷಣೆಗೆ ಹೆಲಿಕಾಪ್ಟರ್ ಏರುವುದು, ರೈತರ ನಡುವೆ ಹೊಲದಲ್ಲಿ ಕೂರುವುದು, ದಿಢೀರ್ ಭೇಟಿಯ ನೆಪದಲ್ಲಿ ರೈತರು ಮತ್ತು ಸಣ್ಣ ವ್ಯಾಪಾರಿಗಳೊಂದಿಗೆ ಸಂವಾದ ನಡೆಸುವುದು, ಕೂಲಿಗಳ ಜೊತೆ ಕೂತು ತಿಂಡಿ ತಿನ್ನುವುದು, ಹಾಸ್ಟೆಲ್ ವಿದ್ಯಾರ್ಥಿಗಳೊಂದಿಗೆ ಮುದ್ದೆ ಮತ್ತು ಬಸ್ಸಾರು ಸವಿಯುವುದು- ಸಿಗುವ ಸಣ್ಣ ಅವಕಾಶವನ್ನು ಕೂಡ ಪ್ರಚಾರಕ್ಕೆ ಬಳಸಿಕೊಳ್ಳುವ ಹಪಾಹಪಿ ಎದ್ದುಕಾಣುತ್ತಿದೆ.

ಇದಕ್ಕೆ ಪೂರಕವಾಗಿ ಇತ್ತೀಚೆಗೆ ಸರ್ಕಾರಗಳ ಸಾಧನೆಯನ್ನು ಯೋಜನೆಗಳ ಸಂಖ್ಯೆಯಿಂದ ಅಳೆಯುವ ಪ್ರವೃತ್ತಿ ಹೆಚ್ಚಾಗಿದೆ. ಎಷ್ಟು ಯೋಜನೆಗಳು ಘೋಷಿಸಲ್ಪಟ್ಟವು, ಎಷ್ಟು ಕಾಮಗಾರಿಗಳಿಗೆ ಶಂಕುಸ್ಥಾಪನೆ ನಡೆಯಿತು, ಎಷ್ಟು ಉದ್ಘಾಟನೆಯಾದವು ಎಂಬುದೇ ಪ್ರಚಾರದ ಕೇಂದ್ರವಾಗುತ್ತದೆ. ದಿನ ಬೆಳಗಾದರೆ ದಿನಪತ್ರಿಕೆಗಳ ಮೊದಲ ಪುಟಗಳಲ್ಲಿ ಮುಖ್ಯಮಂತ್ರಿಗಳ ದೊಡ್ಡ ಚಿತ್ರಗಳ ಜಾಹೀರಾತುಗಳು ಸಾಮಾನ್ಯವಾಗಿವೆ. ಅಧಿಕಾರಕ್ಕೆ ಏರಿ ನೂರು ದಿನಗಳಾಗುತ್ತಿದ್ದಂತೆ, ಭಾರೀ ಸಮಾರಂಭ ಏರ್ಪಡಿಸಿದ್ದು ಹಲವರು ಕುಹಕಕ್ಕೆ ಕಾರಣವಾಗಿದೆ.

ಪ್ರಜೆಗಳು ಸರ್ಕಾರವನ್ನು ಆಯ್ಕೆ ಮಾಡಿಕೊಳ್ಳುವುದು ಉತ್ತಮ ಆಡಳಿತ ನೀಡಲು, ಹಕ್ಕುಗಳನ್ನು ರಕ್ಷಿಸಲು, ಸಾರ್ವಜನಿಕ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಲು ಮತ್ತು ತಮ್ಮ ಬದುಕನ್ನು ಉತ್ತಮಗೊಳಿಸಲು. ಸಾರ್ವಜನಿಕ ಹಣದಲ್ಲಿ ನಿರ್ಮಿಸಿದ ಯೋಜನೆಗೆ ರಾಜಕೀಯ ಪಕ್ಷದ ಜಾಹೀರಾತು ಅಂಟಿಸುವುದು ಅಕ್ಷಮ್ಯ.

ಅಧಿಕಾರಕ್ಕೆ ಬಂದ ಕ್ಷಣದಿಂದಲೇ ಜನರ ಸೇವೆ ಮಾಡುವ ಅವಕಾಶ ದೊರೆಯುತ್ತದೆ. ಆದರೆ ಆ ಅವಕಾಶವನ್ನು ಅವರು ಅಧಿಕಾರದ ಪ್ರದರ್ಶನ, ಪ್ರಚಾರ ಮತ್ತು ರಾಜಕೀಯ ಲಾಭದ ಸಾಧನವಾಗಿ ಪರಿವರ್ತಿಸಿಕೊಳ್ಳುತ್ತಾರೆ. ಸರ್ಕಾರದ ಕಾರ್ಯಕ್ರಮಗಳು, ಯೋಜನೆಗಳು, ಕೆಲಸಗಳ ಬಗ್ಗೆ ಜನರಿಗೆ ಮಾಹಿತಿ ನೀಡುವುದು ಅಗತ್ಯ. ಅದಕ್ಕಾಗಿಯೇ ವಾರ್ತಾ ಮತ್ತು ಪ್ರಚಾರ ಇಲಾಖೆಯಿದೆ. ಆದರೆ ಅದನ್ನು ಜಾಹೀರಾತು ನೀಡುವ ಏಜೆನ್ಸಿ ಯನ್ನಾಗಿಸಲಾಗಿದೆ.

ಉತ್ತಮ ಸರ್ಕಾರವೆಂದರೆ ಹೆಚ್ಚು ಜಾಹೀರಾತು ನೀಡುವ ಸರ್ಕಾರವಲ್ಲ; ಜನರು ಕಡಿಮೆ ದೂರು ಹೇಳುವ ಸರ್ಕಾರ. ಉತ್ತಮ ಆಡಳಿತವೆಂದರೆ ಹೆಚ್ಚು ಉದ್ಘಾಟನೆ ಮಾಡುವ ಆಡಳಿತವಲ್ಲ; ಸಾಮಾನ್ಯ ನಾಗರಿಕನ ಕೆಲಸವನ್ನು ಕಡಿಮೆ ಸಮಯದಲ್ಲಿ ಮಾಡಿಕೊಡುವ ಆಡಳಿತ. ನಿಜವಾದ ಪ್ರಜಾ ಸೇವೆ ಎಂದರೆ ದೊಡ್ಡ ವೇದಿಕೆಗಳಲ್ಲಿ ನಿಂತು ಘೋಷಿಸುವುದಲ್ಲ; ಜನರ ಬದುಕಿನಲ್ಲಿ ತಣ್ಣಗೆ ಅನುಭವಕ್ಕೆ ಬರುವ ಸೇವೆ. ಪ್ರಜಾ ಸೇವೆಯ ನಿಜವಾದ ಪ್ರಮಾಣಪತ್ರ ಸರ್ಕಾರದ ಜಾಹೀರಾತಿನಲ್ಲಿ ಇರುವುದಿಲ್ಲ; ಅದು ಪ್ರಜೆಯ ಬದುಕಿನಲ್ಲಿರುತ್ತದೆ.

ಈಗಲೂ ಕಾಲ ಮಿಂಚಿಲ್ಲ, ಸರ್ಕಾರದ ಕಾರ್ಯಕ್ರಮಗಳು, ಯೋಜನೆಗಳು ಜನರಿಗೆ ತಲುಪಲು ಪ್ರಚಾರ ಮುಖ್ಯ; ಅದಕ್ಕಿಂತ ಸಾಮಾನ್ಯರ ಬದುಕಿನಲ್ಲಿ ಬದಲಾವಣೆ ತರುವುದು ಇನ್ನೂ ಮುಖ್ಯ. ಪ್ರಜಾ ಸೇವೆ ಎಂದರೆ ಅಧಿಕಾರದಲ್ಲಿರುವವರು ಜನರಿಗೆ ಮಾಡುವ ಉಪಕಾರವಲ್ಲ. ಜನ ನೀಡುವ ಅಧಿಕಾರವನ್ನು ಬಳಸಿಕೊಂಡು ಜನರ ಬದುಕನ್ನು ಸುಧಾರಿಸುವುದು.


ರಾಮಮಂದಿರದ ಬಾಣ ಖಾಲಿ: 2029ರ ಲೋಕಸಭೆಗೆ 'ಸಮಾನ ನಾಗರಿಕ ಸಂಹಿತೆ' ಅಸ್ತ್ರಕ್ಕಾಗಿ ತಡಕಾಡುತ್ತಿರುವ ಅಮಿತ್ ಶಾ

ರಾಮಮಂದಿರದ ಭಾವನಾತ್ಮಕ ಅಲೆ ಚುನಾವಣೆಯಲ್ಲಿ ತಣಿಯುತ್ತಿದ್ದಂತೆ, 'ಮೋಶಾ' ಜೋಡಿ 2029ಕ್ಕಾಗಿ ಸಮಾನ ನಾಗರಿಕ ಸಂಹಿತೆ ಮತ್ತು ಕ್ಷೇತ್ರ ಪುನರ್ವಿಂಗಡಣೆಯಂತಹ ಹೊಸ ರಾಜಕೀಯ ಅಸ್ತ್ರಗಳನ್ನು ಮಸೆದು ಹರಿತಗೊಳಿಸುವ ಸಂಚಿಗೆ ಸಿದ್ಧವಾಗುತ್ತಿದೆ.

2024ರ ಲೋಕಸಭೆ ಚುನಾವಣೆಯ ಫಲಿತಾಂಶ ಭಾರತೀಯ ರಾಜಕೀಯದಲ್ಲಿ ಒಂದು ಪ್ರಮುಖ ಬದಲಾವಣೆಯ ಸುಳಿವು ನೀಡಿತು. ಅಯೋಧ್ಯೆಯ ರಾಮಮಂದಿರದಿಂದಾಗಿ ನಮಗೆ ಬಹುಮತಕ್ಕೂ ಅಧಿಕ ಕ್ಷೇತ್ರಗಳಲ್ಲಿ ಗೆಲುವು ಪಕ್ಕಾ ಎಂಬುದು ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅನಿಸಿಕೆಯಾಗಿತ್ತು. ಅದಕ್ಕಾಗಿ ಚಾರ್ ಸೌ ಪಾರ್ (400ಕ್ಕೂ ಅಧಿಕ ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲುತ್ತದೆ) ಎಂಬ ಘೋಷಣೆ ಕೂಗುತ್ತಿದ್ದರು. ಆದರೆ ಚುನಾವಣೆ ಫಲಿತಾಂಶ ಎಲ್ಲವನ್ನೂ ಬುಡಮೇಲು ಮಾಡಿತು. ರಾಮಮಂದಿರ ನಿರ್ಮಾಣದಂತಹ ದಶಕಗಳ ಭರವಸೆ ಈಡೇರಿದ ಮೇಲೂ, ಮತದಾರರು ಬಿಜೆಪಿಗೆ ಸ್ಪಷ್ಟ ಬಹುಮತ ನೀಡದೆ ಮೈತ್ರಿ ಸರ್ಕಾರ ರಚನೆಗೆ ತಳ್ಳಿದರು.

ಹಿಂದುತ್ವದ ಅತ್ಯಂತ ಶಕ್ತಿಶಾಲಿ ಬ್ರಹ್ಮಾಸ್ತ್ರ ಎಂದೇ ಬಿಂಬಿತವಾಗಿದ್ದ ರಾಮಮಂದಿರ ವಿಚಾರವು ರಾಜಕೀಯವಾಗಿ ಅಪೇಕ್ಷಿತ ಫಲಿತಾಂಶ ನೀಡಲು ವಿಫಲವಾಗಿದೆ ಎಂಬುದು ಸ್ಪಷ್ಟವಾಗುತ್ತಿದ್ದಂತೆಯೇ, ಆಡಳಿತಾರೂಢ ಮೋಶಾ (ಮೋದಿ-ಶಾ) ಜೋಡಿ ಮುಂದಿನ 2029ರ ಸಾರ್ವತ್ರಿಕ ಚುನಾವಣೆಗೆ ಹೊಸ ಕಾರ್ಯತಂತ್ರಗಳ ಅನ್ವೇಷಣೆಗೆ ಧುಮುಕಿದೆ. ಇತ್ತೀಚೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 2029ರ ವೇಳೆಗೆ ಎನ್‌ಡಿಎ ಆಡಳಿತವಿರುವ 21 ರಾಜ್ಯಗಳಲ್ಲಿ ಸಮಾನ ನಾಗರಿಕ ಸಂಹಿತೆ (ಯುಸಿಸಿ) ಜಾರಿಗೊಳಿಸುವ ಗಡುವನ್ನು ಘೋಷಿಸಿದ್ದಾರೆ. ಈ ಪ್ರಕಟಣೆಯು ಕೇವಲ ಒಂದು ಆಡಳಿತಾತ್ಮಕ ನಿರ್ಧಾರವಲ್ಲ, ಬದಲಿಗೆ ಭವಿಷ್ಯದ ಚುನಾವಣೆಗಾಗಿ ಸಿದ್ಧಪಡಿಸಲಾಗುತ್ತಿರುವ ಒಂದು ಕಾರ್ಯತಂತ್ರದ ಭಾಗ ಎಂಬುದು ಸ್ಪಷ್ಟ.

ಉತ್ತರಾಖಂಡದಲ್ಲಿ ಈಗಾಗಲೇ ಮಾದರಿಯಾಗಿ ಜಾರಿಯಾಗಿರುವ ಸಮಾನ ನಾಗರಿಕ ಸಂಹಿತೆಯನ್ನು ಬಿಜೆಪಿ ನೇತೃತ್ವದ ಎಲ್ಲಾ ರಾಜ್ಯಗಳಲ್ಲಿ ವಿಸ್ತರಿಸುವ ಯೋಜನೆ ಇದಾಗಿದೆ. ಇದು ಮೇಲ್ನೋಟಕ್ಕೆ ಏಕರೂಪದ ಕಾನೂನು



ಎಂದು ಕಂಡರೂ, ಇದರ ಹಿಂದೆ ಹಿಂದು-ಮುಸ್ಲಿಂ ಧ್ರುವೀಕರಣವನ್ನು ಜೀವಂತವಾಗಿಡುವ ರಾಜಕೀಯ ಉದ್ದೇಶವಿದೆ. ವಿವಾಹ, ವಿಚ್ಛೇದನ, ಉತ್ತರಾಧಿಕಾರ ಹಾಗೂ ದತ್ತು ಸ್ವೀಕಾರದಂತಹ ವೈಯಕ್ತಿಕ ಕಾನೂನುಗಳಲ್ಲಿ ತಿದ್ದುಪಡಿ ತರುವ ಮೂಲಕ ಸಾಂಪ್ರದಾಯಿಕ ಮತಬ್ಯಾಂಕ್ ಅನ್ನು ಮತ್ತೆ ತನ್ನತ್ತ ಸೆಳೆಯುವ ಪ್ರಯತ್ನವಿದು.

ಬಹುವಿಧ ಅಸ್ತ್ರಗಳ ಪ್ರಯೋಗ: ಎಸ್‌ಐಆರ್ ಮತ್ತು ಕ್ಷೇತ್ರ ಪುನರ್ವಿಂಗಡಣೆ

2024ರ ಫಲಿತಾಂಶವು ಒಂದೇ ಒಂದು ಭಾವನಾತ್ಮಕ ವಿಚಾರವನ್ನು ನೆಚ್ಚಿಕೊಂಡು ಚುನಾವಣೆ ಎದುರಿಸುವುದು ಅಪಾಯಕಾರಿ ಎಂಬುದನ್ನು ಸಾಬೀತುಪಡಿಸಿದೆ. ಹೀಗಾಗಿ, ಕೇವಲ ಯುಸಿಸಿಗೆ ಸೀಮಿತವಾಗದೆ, ಇತರ ಸಾಂಸ್ಥಿಕ ಹಾಗೂ ತಾಂತ್ರಿಕ ಅಸ್ತ್ರಗಳನ್ನು ಸಿದ್ಧಪಡಿಸಲಾಗುತ್ತಿದೆ. ಒಂದೆಡೆ ಕ್ಷೇತ್ರ ಪುನರ್ವಿಂಗಡಣೆಯು ಜನಸಂಖ್ಯೆಯ ಆಧಾರದ ಮೇಲೆ ಲೋಕಸಭಾ ಕ್ಷೇತ್ರಗಳ ಪುನರ್ವಿಂಗಡಣೆ ನಡೆಸುವ ಮೂಲಕ, ಉತ್ತರ ಭಾರತದ ರಾಜ್ಯಗಳಲ್ಲಿ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸಿ ರಾಜಕೀಯವಾಗಿ ಮೇಲುಗೈ ಸಾಧಿಸುವ ತಂತ್ರ ನಡೆಸಲಾಗುತ್ತಿದೆ.

ಹೊಸ ಜನಗಣತಿ ಆಧಾರಿತ ಕ್ಷೇತ್ರ ಪುನರ್ವಿಂಗಡಣೆ ಜಾರಿಯಾದರೆ, ಹೆಚ್ಚು ಜನಸಂಖ್ಯೆ ಹೊಂದಿರುವ ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ ಹಾಗೂ ರಾಜಸ್ಥಾನದಂತಹ ಉತ್ತರ ಭಾರತದ ರಾಜ್ಯಗಳಲ್ಲಿ ಲೋಕಸಭಾ ಕ್ಷೇತ್ರಗಳ ಸಂಖ್ಯೆ ಗಣನೀಯವಾಗಿ ಹೆಚ್ಚಾಗಲಿದೆ. ಈ ರಾಜ್ಯಗಳು ಸಾಂಪ್ರದಾಯಿಕವಾಗಿ ಬಿಜೆಪಿಯ ಪ್ರಬಲ ಕೋಟೆಗಳಾಗಿದ್ದರಿಂದ, ಕೇಂದ್ರದಲ್ಲಿ ಅಧಿಕಾರ ಹಿಡಿಯುವುದು ಅವರಿಗೆ ಸುಲಭವಾಗುತ್ತದೆ.

ಕುಟುಂಬ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಿ ಜನಸಂಖ್ಯೆಯನ್ನು ನಿಯಂತ್ರಿಸಿದ ದಕ್ಷಿಣ ಭಾರತದ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಕೇರಳ ಮತ್ತು ಆಂಧ್ರಪ್ರದೇಶಗಳ ಲೋಕಸಭಾ ಸ್ಥಾನಗಳ ಅನುಪಾತವು ಕಡಿಮೆಯಾಗುವ ಅಥವಾ ಉತ್ತರ ಭಾರತಕ್ಕೆ ಹೋಲಿಸಿದರೆ ಶಕ್ತಿಹೀನವಾಗುವ ಭೀತಿ ಇದೆ. ನೂತನ ಸಂಸತ್ ಭವನದಲ್ಲಿ ಸಂಸದರ ಆಸನ ಸಾಮರ್ಥ್ಯವನ್ನು (888 ಸ್ಥಾನಗಳು) ಹೆಚ್ಚಿಸಿರುವುದು ಈ ಸೀಮಾ ನಿರ್ಣಯ ಪ್ರಕ್ರಿಯೆಗೆ ಪೂರ್ವಭಾವಿ ಸಿದ್ಧತೆಯಾಗಿದೆ. 2029ರ ವೇಳೆಗೆ ಕ್ಷೇತ್ರಗಳ ಸಂಖ್ಯೆ ಹೆಚ್ಚಿದರೆ, ಬಿಜೆಪಿ ಮೈತ್ರಿಕೂಟಕ್ಕೆ ಸರಳ ಬಹುಮತ ಪಡೆಯುವ ರಾಜಕೀಯ ಹಾದಿ ಮತ್ತಷ್ಟು ಸರಳವಾಗಲಿದೆ.

ಇನ್ನೊಂದೆಡೆ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ -ಎಸ್‌ಐಆರ್ ಮೂಲಕ ಮುಸ್ಲಿಮರು, ದಲಿತರು, ಪ್ರಮುಖವಾಗಿ ಅಲ್ಪಸಂಖ್ಯಾತರು, ಮಹಿಳೆಯರ ಮತದಾನದ ಹಕ್ಕನ್ನು ಕಸಿದುಕೊಂಡು ರಾಜಕೀಯ ಸಮೀಕರಣಗಳನ್ನು ಬಿಜೆಪಿ ತನಗೆ ಅನುಕೂಲಕರವಾಗಿ ಬದಲಾಯಿಸಿಕೊಳ್ಳುತ್ತಿದೆ. ಎಸ್‌ಐಆರ್ ಮೂಲಕ ಬಿಜೆಪಿ ತನಗೆ ಅನುಕೂಲವಲ್ಲದ ಅಥವಾ ವಿರೋಧಿ ಮತಬ್ಯಾಂಕ್‌ಗಳನ್ನು ಗುರುತಿಸಲು ಹಾಗೂ ಕಾನೂನಾತ್ಮಕವಾಗಿಯೇ ಅವುಗಳನ್ನು ಮತದಾರರ ಪಟ್ಟಿಯಿಂದ ಹೊರಗಿಡುವ ತಂತ್ರ ನಡೆಸಿದೆ.

ಹೀಗೆ ಅಯೋಧ್ಯೆಯ ರಾಮಮಂದಿರ ವಿಚಾರವು ಒಂದು ಸಾರಿ ನೀಡಿದ ರಾಜಕೀಯ ಲಾಭವು ನಿರಂತರವಲ್ಲ ಎಂಬುದು ಬಿಜೆಪಿಗೆ ಈಗ ಸ್ಪಷ್ಟವಾಗಿದೆ. ಹಾಗಾಗಿ ರಾಮಮಂದಿರದ ಬತ್ತಳಿಕೆ ಖಾಲಿಯಾದ ನಂತರ, ಬಿಜೆಪಿಯು ತನ್ನ ಸೈದ್ಧಾಂತಿಕ ಕಾರ್ಯಸೂಚಿಯನ್ನು ಕಾಪಾಡಿಕೊಳ್ಳಲು ಹಾಗೂ ಚುನಾವಣಾ ಮೇಲುಗೈ ಉಳಿಸಿಕೊಳ್ಳಲು ನೂತನ ತಂತ್ರಗಳನ್ನು ಶೂಲಕ್ಕೇರಿಸುತ್ತಿದೆ. ಭಾವನಾತ್ಮಕ ಅಸ್ತ್ರಗಳ (ಯುಸಿಸಿ, ಹಿಂದು-ಮುಸ್ಲಿಂ ವಿಚಾರ) ಜೊತೆಗೆ, ಸಾಂಸ್ಥಿಕ ನಿಯಂತ್ರಣದ ಅಸ್ತ್ರಗಳನ್ನು (, ಕ್ಷೇತ್ರ ಪುನರ್ವಿಂಗಡಣೆ, ಒಂದು ದೇಶ ಒಂದು ಚುನಾವಣೆ) ಬೆಸೆದು 2029ರ ಚುನಾವಣಾ ಅಖಾಡವನ್ನು ಮೊದಲೇ ತನಗೆ ಸಂಪೂರ್ಣ ಅನುಕೂಲಕರವಾಗಿ ಸಿದ್ಧಪಡಿಸಿಕೊಳ್ಳುತ್ತಿದೆ. ಹೀಗಾಗಿ 2029ರ ಚುನಾವಣೆ ದೇಶದ ರಾಜಕೀಯ ಚಿತ್ರಣದಲ್ಲಿ ಮತ್ತಷ್ಟು ತೀವ್ರ ಧ್ರುವೀಕರಣ ಮತ್ತು ಸಾಂಸ್ಥಿಕ ಬದಲಾವಣೆಗಳಿಗೆ ಸಾಕ್ಷಿಯಾಗುವ ಲಕ್ಷಣಗಳು ಗೋಚರಿಸುತ್ತಿವೆ.

ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ ಮತ್ತು ಸದ್ಯದ ಬಿಕ್ಕಟ್ಟುಗಳು

ಇಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನ. ಜಾಗತಿಕವಾಗಿ ಕುಸಿಯುತ್ತಿರುವ ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯಲು ಯುನೈಟೆಡ್ ನೇಷನ್ಸ್ ಜನರಲ್ ಅಸೆಂಬ್ಲಿಯು ಸೆಪ್ಟಂಬರ್ 15ನ್ನು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನವನ್ನಾಗಿ ಆಚರಿಸುವ ಘೋಷಣೆ ಮಾಡಿತು. ಪರಿಣಾಮ ಇಂಟರ್ ಪಾರ್ಲಿಮೆಂಟರಿ ಯೂನಿಯನ್ (ಐಪಿಯು) 2008ರಿಂದ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನದ ಆಚರಣೆಯನ್ನು ಆರಂಭಿಸಿತು.

ಫಿಲಿಪ್ಪೈನ್ಸ್ ಜನಚಳವಳಿಯ ಹೋರಾಟಗಾರ್ತಿ ಕೊರಾಜನ್ ಸಿ.ಅಕ್ವಿನೋ ಪೀಪಲ್ ಪವರ್ ರೆವಲ್ಯೂಷನ್ ಮೂಲಕ ಫರ್ಡಿನಾಂಡ್ ಮಾರ್ಕೋಸ್‌ನ 20 ವರ್ಷಗಳ ಸರ್ವಾಧಿಕಾರವನ್ನು ಕೊನೆಗೊಳಿಸಿ 1986ರ ಸೆಪ್ಟಂಬರ್ 15ರಂದು ಪ್ರಜಾಪ್ರಭುತ್ವವನ್ನು ಮರುಸ್ಥಾಪಿಸುತ್ತಾಳೆ. ಇದು ಗಂಡಾಳ್ವಿಕೆಯ ವಿರುದ್ಧದ ಹೆಣ್ಣಿನ ವಿಜಯದ ಸಂಕೇತವೂ ಕೂಡ.

ಹಾಗಾದರೆ ಈ ಕೊರಾಜನ್ ಸಿ.ಆಕ್ವಿನೋ ಯಾರು? ಸರ್ವಾಧಿಕಾರವನ್ನು ಮಣಿಸಿದರೂ ಮುಂದೆ ಆಕೆಯೂ ಬಂಡವಾಳಶಾಹಿ ಮತ್ತು ಭೂಮಾಲೀಕರ ಪರವಾದದ್ದೇಕೆ? ಯಾವ ಸರ್ವಾಧಿಕಾರಿಯನ್ನು ಆಕ್ವಿನೋ ಮಣಿಸಿದ್ದಳೋ ಆ ಫರ್ಡಿನಾಂಡ್ ಮಾರ್ಕೋಸ್‌ನ ಮಗನಾದ ಫರ್ಡಿನಾಂಡ್ ಭಾಂಗ್ ಬಾಂಗ್ ಮಾರ್ಕೋಸ್ ಅಧಿಕಾರಕ್ಕೆ ಬಂದಿರುವುದು ಏನನ್ನು ಸೂಚಿಸುತ್ತದೆ? ಈ ಸ್ಥಿತ್ಯಂತರವೇ ಇಂದಿನ ವರ್ತಮಾನದ ಪ್ರಜಾಪ್ರಭುತ್ವದ ಬಿಕ್ಕಟ್ಟುಗಳನ್ನು ಮುಂದಿಡುತ್ತದೆ.

ಆಗ್ನೇಯ ಏಷಿಯಾದ ದ್ವೀಪವಾದ ರಿಪಬ್ಲಿಕ್ ಆಫ್ ದ ಫಿಲಿಪೈನ್ಸ್‌ನ ಫರ್ಡಿನಾಂಡ್ ಮಾರ್ಕೋಸ್ ಕ್ರೋನಿ ಕ್ಯಾಪಿಟಲ್‌ಗಳ ಸಹಾಯದಿಂದ ನಾನೇ ಈ ದೇಶದ ನಿಜವಾದ ಧೀರ ಎನ್ನುವ ನಂಬಿಕೆ ಹುಟ್ಟಿಸಿ, ವ್ಯಾಪಕ ಸುಳ್ಳು ಮತ್ತು ಹುಸಿ ಭರವಸೆಯನ್ನು ನೀಡಿ ಫಿಲಿಫೈನ್ಸ್ ನಲ್ಲಿ ಸರ್ವಾಧಿಕಾರ ಸ್ಥಾಪಿಸುತ್ತಾನೆ. 1965ರಿಂದ 1986ರತನಕ ಅಕ್ಷರಶಃ ಸರ್ವಾಧಿಕಾರಿಯಾಗಿ ಆಳುತ್ತಾನೆ. ಮಾರ್ಕೋಸ್‌ನ ಆಡಳಿತವು ವ್ಯಾಪಕ ಭ್ರಷ್ಟಾಚಾರದಿಂದ ಕೂಡಿತ್ತು. ಆತನ ದುಂದುಗಾರಿಕೆ ಮತ್ತು ಕ್ರೌರ್ಯದಿಂದ ಇಡೀ ಫಿಲಿಫೈನ್ಸ್ ಜನರು ಉಸಿರುಗಟ್ಟಿದ್ದರು. ಈತನ ಆಡಳಿತದಲ್ಲಿ ಫಿಲಿಫೈನ್ಸ್ ಜನರು ತೀವ್ರ ಬಡತನದಲ್ಲಿ ನರಳಿದರು. ಮಾಧ್ಯಮಗಳ ಮೇಲೆ ಹಿಂಸಾತ್ಮಕ ದಾಳಿ ಮಾಡಿದನು. ಇದರಿಂದ ಬಹುಪಾಲು ಮಾಧ್ಯಮಗಳು ಮಾರ್ಕೋಸ್‌ನ ಅಡಿಯಾಳಾಗಿ ವಕಾಲತ್ತು ವಹಿಸಿದವು. 1981ರಲ್ಲಿ ಮೂರನೆಯ ಬಾರಿಗೆ ಅಧ್ಯಕ್ಷೀಯ ಚುನಾವಣೆಯಲ್ಲಿ ವಂಚನೆ ಮಾಡಿ ಮರಳಿ ಅಧಿಕಾರ ಹಿಡಿದನು. ಆರ್ಥಿಕವಾಗಿ ತೀವ್ರ ಕುಸಿತ ಉಂಟಾಯಿತು. ವಿರೋಧ ಪಕ್ಷದ ನಾಯಕ ಆಕ್ವಿನೋ ಜೂನಿಯರ್ ಅವರ ಹತ್ಯೆ ಮಾಡಲಾಯಿತು.

ಈ ಹತ್ಯೆಯಿಂದ ಕಂಗೆಟ್ಟ ಆಕ್ವಿನೋ ಮಡದಿ ಕೊರಜಾನೋ ಜನಚಳವಳಿ ಕಟ್ಟಲು ಮುಂದಾಗುತ್ತಾಳೆ. ಈ ಹತ್ಯೆಯು ಸಾರ್ವಜನಿಕವಾಗಿ ಮಾರ್ಕೋಸ್ ಬಗ್ಗೆ ವ್ಯಾಪಕ ವಿರೋಧ ಭುಗಿಲೇಳುವಂತೆ ಮಾಡುತ್ತದೆ. ಜನರು ದಂಗೆಯೇಳಲು ಶುರುಮಾಡುತ್ತಾರೆ. ಇದನ್ನರಿತ ಮಾರ್ಕೋಸ್ 1986ರಲ್ಲಿ ಕ್ಷಿಪ್ರ ಚುನಾವಣೆ ಘೋಷಿಸುತ್ತಾನೆ. ಹೀಗೆ ಸಾಮೂಹಿಕ ವಂಚನೆ, ರಾಜಕೀಯ ಪ್ರಕ್ಷುಬ್ಧ ವಾತಾವರಣ, ಮಾನವ ಹಕ್ಕುಗಳ ಉಲ್ಲಂಘನೆ ಎಲ್ಲವೂ ಒಟ್ಟಾಗಿ ಫಿಲಿಫೈನ್ಸ್ ನಲ್ಲಿ 1986ರ ಪೀಪಲ್ ಪವರ್ ರೆವಲ್ಯೂಷನ್ ನಡೆಯುತ್ತದೆ. ಈ ಕ್ರಾಂತಿಯ ಮುಂದಾಳುವಾಗಿ ಕೊರಜಾನೋ ಸಿ. ಆಕ್ವಿನೋ ಮುನ್ನಲೆಗೆ ಬರುತ್ತಾಳೆ. ಈ ಕ್ರಾಂತಿಯಿಂದಾಗಿ ಮಾರ್ಕೋಸ್ ಮಡದಿ ಮಕ್ಕಳೊಂದಿಗೆ ಹವಾಯಿ ದ್ವೀಪಕ್ಕೆ ಓಡಿಹೋಗುತ್ತಾನೆ. ಹೀಗೆ ಭೂಸುಧಾರಣೆಗಾಗಿ ಹೋರಾಡುತ್ತಿದ್ದ ಮಾವೋವಾದಿ ಕ್ರಾಂತಿಕಾರಿಗಳ ಬೆಂಬಲದಿಂದ ಆಕ್ವಿನೋ ಅಧಿಕಾರಕ್ಕೆ ಬರುತ್ತಾಳೆ.

1986ರ ಸೆಪ್ಟಂಬರ್ 15ರಂದು ಮಾರ್ಕೋಸ್‌ನ ಸರ್ವಾಧಿಕಾರವನ್ನು ಮಣಿಸಿ ಫಿಲಿಫೈನ್ಸ್ ಅನ್ನು ಮೊದಲ ಮಹಿಳಾ ಅಧ್ಯಕ್ಷೆಯಾಗಿ ಆಕ್ವಿನೋ ಅಧಿಕಾರ ವಹಿಸಿಕೊಳ್ಳುತ್ತಾಳೆ. ಈ ಮೂಲಕ ಏಷಿಯಾದ ಮೊದಲ ಮಹಿಳಾ ಅಧ್ಯಕ್ಷೆ ಎಂದು ಗುರುತಿಸಲ್ಪಡುತ್ತಾಳೆ. ಅಧ್ಯಕ್ಷೆಯಾಗಿ ಅಧಿಕಾರ ವಹಿಸಿಕೊಂಡ ನಂತರ ಕೈಗೊಂಡ ಮೊದಲ ಕಾರ್ಯವೆಂದರೆ, ಮಾರ್ಕೋಸ್‌ನ ಶತಕೋಟಿ ಡಾಲರ್ ಅಕ್ರಮ ಸಂಪತ್ತನ್ನು ವಶಪಡಿಸಿಕೊಂಡು ಜನಕಲ್ಯಾಣ ಕಾರ್ಯಗಳಿಗೆ ಯೋಜನೆ ರೂಪಿಸಿದ್ದು. 1973ರಲ್ಲಿ ಜಾರಿಯಾಗಿದ್ದ ಮಾರ್ಷಲ್ ಯುಗದ ಸರ್ವಾಧಿಕಾರಿ ಸಂವಿಧಾನವನ್ನು ರದ್ದುಗೊಳಿಸುತ್ತಾಳೆ. ನ್ಯಾಯವಾದಿ ಸಿಸಿಲಿಯಾ ಮುನೋಜ್-ಪಾಲ್ಮಾ ಅವರನ್ನು ಹೊಸ ಸಂವಿಧಾನ ರಚನೆಯ ಅಧ್ಯಕ್ಷೆಯನ್ನಾಗಿ ನೇಮಿಸುತ್ತಾಳೆ.

ಕರಡು ರಚನೆಯಾದ ನಂತರ ಫಿಲಿಫೈನ್ಸ್ ನ ರಾಷ್ಟ್ರವ್ಯಾಪಿ ಜನಾಭಿಪ್ರಾಯ ಸಂಗ್ರಹಿಸಿ 1987ರ ಫೆಬ್ರವರಿ 2ರಂದು ಪ್ರಜಾಪ್ರಭುತ್ವದ ಸ್ವತಂತ್ರ ಸಂವಿಧಾನವನ್ನು ಜಾರಿಗೊಳಿಸಲಾಗುತ್ತದೆ. ಕ್ರೋನಿ ಕ್ಯಾಪಿಟಲ್‌ಗಳನ್ನು ನಿಯಂತ್ರಿಸಿ ಮಾರುಕಟ್ಟೆಯ ಉದಾರ ನೀತಿಯನ್ನು ಜಾರಿಗೊಳಿಸಿ ಆರ್ಥಿಕ ವಿಕೇಂದ್ರೀಕರಣಕ್ಕೆ ಬೆಂಬಲ ನೀಡಿದಳು.

ಜನವರಿ 22, 1987ರಂದು ರೈತರು ಭೂಸುಧಾರಣೆಗಾಗಿ ಶಾಂತಿಯುತ ಚಳವಳಿ ನಡೆಸಿದರು. ಆಗ ಪೊಲೀಸ್ ಮತ್ತು ನೌಕಾಪಡೆಯ ಗಡಿಮೀರಿದ ಕಾರಣಕ್ಕೆ ಗುಂಡುಹಾರಿಸಿದ ಪರಿಣಾಮ 12 ನಾಗರಿಕರು ಕೊಲ್ಲಲ್ಪಟ್ಟು 50 ಜನರು ಗಾಯಾಳುಗಳಾದರು. ಇದನ್ನೆ ಮೆಂಡಿಯೋಲಾ ಹತ್ಯಾಕಾಂಡ ಎಂದು ಗುರುತಿಸುತ್ತಾರೆ. ಆಕ್ವಿನೋ ರಾಜವಂಶದ ಪರಂಪರೆಯಿಂದ ಬಂದವಳು. ಅಪಾರ ಆಸ್ತಿಪಾಸ್ತಿ ಸಂಪತ್ತಿನ ಒಡತಿಯೂ ಆಗಿದ್ದವಳು. ಹೀಗಾಗಿ ಫಿಲಿಫೈನ್ಸ್ ಮಾವೋವಾದಿ ಕ್ರಾಂತಿಕಾರಿಗಳ ವಿರೋಧಕ್ಕೂ ಗುರಿಯಾಗುತ್ತಾಳೆ. ತನ್ನ ಸಂಪತ್ತಿನ ಶೇರುಗಳನ್ನು ಹಂಚುವ ಮೂಲಕ ಈ ವಿರೋಧವನ್ನು ಹತ್ತಿಕ್ಕಲು ಪ್ರಯತ್ನಿಸುತ್ತಾಳೆ. ಜನಚಳವಳಿಯ ಒತ್ತಡ ಹೆಚ್ಚಿದಂತೆ ಕೃಷಿಯಲ್ಲಿ ಆಮೂಲಾಗ್ರ ಬದಲಾವಣೆ ತರಲು ಆಕೆ ಭೂ ಸುಧಾರಣೆಯನ್ನು ತರುತ್ತಾಳೆ. ಇದರಿಂದ ಜಮೀನ್ದಾರಿ ಬಲಾಢ್ಯರಿಂದ ಟೀಕೆಯನ್ನು ಎದುರಿಸುತ್ತಾಳೆ. ಇಷ್ಟಾಗಿಯೂ ಸಮಗ್ರ ಕೃಷಿ ಸುಧಾರಣ ಕಾಯ್ದೆ ಜಾರಿಗೊಳಿಸಿ ಭೂಮಾಲೀಕರಿಂದ ಭೂಮಿ ಇಲ್ಲದವರಿಗೆ ಭೂಮಿಯನ್ನು ಮರುಹಂಚಿಕೆ ಮಾಡಲು ಪ್ರಯತ್ನಿಸಿದಳು. ಈ ಕಾಯ್ದೆಯ ನಂತರ 5 ಹೆಕ್ಟೇರಿಗಿಂತ ಹೆಚ್ಚಿನ ಭೂಮಿಯನ್ನು ಯಾರೂ ಹೊಂದುವಂತಿರಲಿಲ್ಲ.

ಈ ಬಗೆಯ ಸುಧಾರಣೆಗಳು ಸಹಜವಾಗಿ ಬಲಾಢ್ಯ ಬಂಡವಾಳಶಾಹಿಗಳಿಗೆ ತೀವ್ರ ನಷ್ಟವಾಗತೊಡಗಿತು. ಮಾರ್ಕೋಸ್ ಬೆಂಬಲದಿಂದ 1986ರಿಂದ 1990ರತನಕ ಆಕ್ವಿನೋ ವಿರುದ್ಧ ಆಂತರಿಕ ದಂಗೆಗಳನ್ನು ಆಯೋಜಿಸತೊಡಗಿದರು. 1990ರಲ್ಲಿ ಸಂಭವಿಸಿದ ಲುಜಾನ್ ಭೂಕಂಪ, 1991ರ ಜ್ವಾಲಾಮುಖಿ ಸ್ಫೋಟ, 1991ರ ಕೊನೆಗೆ ಸಂಭವಿಸಿದ ಚಂಡಮಾರುತದಂತಹ ನೈಸರ್ಗಿಕ ವಿಕೋಪಗಳು ದೇಶದ ಆರ್ಥಿಕತೆಯನ್ನು ದುರ್ಬಲಗೊಳಿಸಿದವು. ಆಕ್ವಿನೋ ನಿಧಾನಕ್ಕೆ ಭೂಮಾಲೀಕರ ಮತ್ತು ಬಂಡವಾಳಶಾಹಿಗಳ ಪರ ವಾಲುತ್ತಾ ಕ್ರಾಂತಿಕಾರಿಗಳ ಸರಣಿ ಕೊಲೆಗಳನ್ನು ನಡೆಸತೊಡಗುತ್ತಾಳೆ.

ಪರಿಣಾಮವಾಗಿ 1992ರ ಅಧ್ಯಕ್ಷೀಯ ಚುನಾವಣೆಯಲ್ಲಿ ತನ್ನದೇ ಪಕ್ಷದ ಫಿಡೆಲ್ ವಿ.ರಾಮೋಸ್ ಅವರನ್ನು ತನ್ನ ಉತ್ತರಾಧಿಕಾರಿಯಾಗಿ ಬೆಂಬಲಿಸುತ್ತಾಳೆ. ನಂತರ ಪಿಲಿಫೈನ್ಸ್ ನ ಸಾರ್ವಜನಿಕ ಚುನಾವಣೆಯಲ್ಲಿ ರಾಮೋಸ್ ಆಯ್ಕೆಯಾಗುತ್ತಾನೆ. ಜೂನ್ 30, 1992ರಂದು ಅಧಿಕಾರ ಹಸ್ತಾಂತರ ಮಾಡುತ್ತಾಳೆ. ಸರಕಾರ ನೀಡಿದ ಮರ್ಸಿಡಿಸ್ ಬೆಂಜ್ ಕಾರ್ ಸರಕಾರಕ್ಕೆ ನೀಡಿ ತನ್ನ ಸಾಮಾನ್ಯವಾದ ಟೊಯೋಟಾ ಕಾರೊಂದರಲ್ಲಿ ಮನೆಗೆ ಮರಳುತ್ತಾಳೆ. ಮುಂದೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಜಾಪ್ರಭುತ್ವ, ಮಾನವ ಹಕ್ಕುಗಳು, ಮತ್ತು ಮಹಿಳಾ ಸಬಲೀಕರಣಕ್ಕಾಗಿ ದುಡಿಯುತ್ತಾಳೆ. ಮನಿಲಾದಲ್ಲಿ ವರ್ಲ್ಡ್ ಕಮಿಷನ್ ಆನ್ ಕಲ್ಚರ್ ಅಂಡ್ ಡೆವಲಪ್ಮೆಂಟ್‌ನ 1994ರ ಸಭೆಯಲ್ಲಿ, ಬರ್ಮಾದ ಪ್ರಜಾಪ್ರಭುತ್ವ ನಾಯಕಿ ಆಂಗ್ ಸಾನ್ ಸೂಕಿಯನ್ನು ಬಂಧನದಿಂದ ಬೇಷರತ್ತಾಗಿ ಬಿಡುಗಡೆ ಮಾಡುವಂತೆ ಒತ್ತಾಯಿಸಿ ಭಾಷಣ ಮಾಡುತ್ತಾಳೆ.

ಆಕ್ವಿನೋ ತನ್ನ ಗಂಡನ ಹೆಸರಿನಲ್ಲಿ 2007ರಲ್ಲಿ ಫೌಂಡೇಶನ್ ಅನ್ನು ಸ್ಥಾಪಿಸಿ ಬಡವರು ಮತ್ತು ನಿರಾಶ್ರಿತರಿಗೆ ನೆರವಾಗುವ ಸಾಮಾಜಿಕ ವಸತಿ ಯೋಜನೆಯನ್ನು ಕೈಗೊಳ್ಳುತ್ತಾಳೆ. ಲಾಭದ ಉದ್ದೇಶವಿಲ್ಲದೆ ಬಡವರಿಗೆ ಕಿರುಬಂಡವಾಳ ಸಾಲದ ಯೋಜನೆಗಳನ್ನು ಜನಪ್ರಿಯಗೊಳಿಸಿದರು. ಆ ನಂತರ ದೀರ್ಘಕಾಲೀನ ಕ್ಯಾನ್ಸರ್‌ನಿಂದ ಬಳಲಿ ಆಕ್ವಿನೊ ಅವರು 76ನೇ ವಯಸ್ಸಿನಲ್ಲಿ ಹೃದಯಾಘಾತದಿಂದ ಆಗಸ್ಟ್ 1, 2009ರಂದು ನಿಧನರಾದರು. ಪ್ರಜಾಪ್ರಭುತ್ವದ ಸಂಕೇತವಾಗಿ ಆಕ್ವಿನೋ ಅವರನ್ನು ಗುರುತಿಸುತ್ತಿದ್ದರೂ ನಂತರದ ಬೆಳವಣಿಗೆಯಲ್ಲಿ ಆಕೆ ಬಂಡವಾಳಶಾಹಿಯ ಪರವಾದ ಜನಚಳವಳಿಯನ್ನು ದಮನ ಮಾಡುವುದು, ಇದೀಗ ಯಾವ ಸರ್ವಾಧಿಕಾರಿಯನ್ನು ಹಿಮ್ಮೆಟ್ಟಿಸಿದ್ದಳೋ ಅದೇ ಮಾರ್ಕೋಸ್‌ನ ಮಗ ಫರ್ಡಿನಾಂಡ್ ಭಾಂಗ್ ಬಾಂಗ್ ಮಾರ್ಕೋಸ್ ಅಧಿಕಾರಕ್ಕೆ ಬಂದಿರುವುದು ಚಾರಿತ್ರಿಕ ವ್ಯಂಗ್ಯವಾಗಿದೆ.

ಈಚೆಗೆ ದೆಹಲಿಯ ಜಂತರ್ ಮಂತರ್‌ನಲ್ಲಿ ಕಾಕ್ರೋಚ್ ಜನತಾ ಪಾರ್ಟಿಯ ಬೆಂಬಲಿತ ಯುವಜನರು ದೊಡ್ಡ ದನಿಯಲ್ಲಿ ಕೇಂದ್ರ ಸರಕಾರದ ವಿರುದ್ಧ ಧನಿ ಎತ್ತಿ ಕೇಂದ್ರ ಸರಕಾರದ ಶಿಕ್ಷಣ ಮಂತ್ರಿ ಧರ್ಮೇಂದ್ರ ಪ್ರಧಾನ್ ಅವರು ರಾಜೀನಾಮೆ ಪಡೆದರು. ಈ ಜೆನ್ ಝೀ ಯುವಜನರ ಹೋರಾಟದ ಬಗೆಗೇ ಚರ್ಚೆ ಸಂವಾದಗಳು ನಡೆಯುತ್ತಿವೆ. ಸಿಜೆಪಿ ಸಂಸ್ಥಾಪಕ ಅಭಿಜಿತ್ ದೀಪ್ಕೆ ಮಹಾರಾಷ್ಟ್ರದ ಸಂಭಾಜಿನಗರ್ ಜಿಲ್ಲೆಯವರು. ವಿಶೇಷವೆಂದರೆ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ನಡೆದಾಡಿದ ಮಹಾರಾಷ್ಟ್ರದ ದಲಿತ ಯುವಕನೊಬ್ಬ ಇಂತಹ ಹೋರಾಟಕ್ಕೆ ನಾಯಕತ್ವ ವಹಿಸಿರುವುದು, ಜೆನ್-ಜೆ ಯುವಜನರು ಜಾತ್ಯತೀತವಾಗಿ ಈತನ ನಾಯಕತ್ವ ಬೆಂಬಲಿಸಿರುವುದು ಈ ದೇಶದ ಯುವಜನರ ಬಗ್ಗೆ ಹೊಸ ಭರವಸೆ ಮೂಡಿಸಿದೆ.

ವಿಡೆಮ್ ಡೆಮಾಕ್ರಸಿ ವರದಿ 2026ರ ಪ್ರಕಾರ ಭಾರತ ಚುನಾಯಿತ ಸರ್ವಾಧಿಕಾರಿ ದೇಶಗಳ ಪಟ್ಟಿಯಲ್ಲಿದೆ. ಇಂತಹ ಸಂದರ್ಭದಲ್ಲಿ ಭಾರತದಲ್ಲಿನ ಯುವಜನರ ಈ ಚಳವಳಿ ಕುಸಿಯುತ್ತಿರುವ ಪ್ರಜಾಪ್ರಭುತ್ವವನ್ನು ಮೇಲೆತ್ತುವ ಕನಸಿನಂತೆ ಕಾಣುತ್ತಿದೆ. ಇದು ಕೇವಲ ಭಾರತದ ವಿದ್ಯಮಾನ ಮಾತ್ರವಲ್ಲ, ಜಗತ್ತಿನಲ್ಲಿ ಪ್ರಜಾಪ್ರಭುತ್ವ ಕೊನೆಗೊಳ್ಳಲಿದೆಯೇ ಎನ್ನುವ ಆತಂಕ ಮನೆಮಾಡಿದೆ. ಈ ಸಂದರ್ಭದಲ್ಲಿ ಭಾರತವನ್ನೂ ಒಳಗೊಂಡಂತೆ ಇಡೀ ಜಗತ್ತಿನ ಪ್ರಜಾಪ್ರಭುತ್ವ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿರುವುದನ್ನು ಸ್ವೀಡನ್ನಿನ ವಿ-ಡೆಮ್ ಸಂಸ್ಥೆಯ 2026ರ ಪ್ರಜಾಪ್ರಭುತ್ವದ ವರದಿ ಬಯಲುಗೊಳಿಸುತ್ತಿದೆ.

ಸ್ವೀಡನ್ ದೇಶದ ರಾಜಕೀಯ ವಿಜ್ಞಾನಿ ಸ್ಟ್ಯಾಫನ್ ಐ ಲಿಂಡ್ಬರ್ಗ್ ನಿರ್ದೇಶಕರಾಗಿರುವ ವೆರೈಟೀಸ್ ಆಫ್ ಡೆಮಾಕ್ರಸಿ (ವಿ-ಡೆಮ್) ಸಂಸ್ಥೆಯ ಪ್ರಜಾಪ್ರಭುತ್ವ ವರದಿಗಳು ಜಾಗತಿಕವಾಗಿ ವಿಶ್ವಸನೀಯ ಚರ್ಚೆ ಸಂವಾದಗಳಿಗೆ ಕಾರಣವಾಗಿವೆ. ಜಾಗತಿಕ ವಿಶ್ವವಿದ್ಯಾಲಯಗಳಲ್ಲಿ ವಿದ್ವತ್ಪೂರ್ಣ ಸಂಶೋಧನೆ ಮತ್ತು ಅಧ್ಯಯನಗಳ ಗುಣಮಟ್ಟ ಕುಸಿಯುತ್ತಿರುವ ಹೊತ್ತಿನಲ್ಲಿ ಸ್ವೀಡನ್ನಿನ ಗೊಥೆನ್ಬರ್ಗ್ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಬದ್ಧತೆಯ ಸಂಶೋಧನ ತಂಡ ಜಗತ್ತಿನ ಗಮನ ಸೆಳೆದಿದೆ. ಈ ವರದಿಯಲ್ಲಿ 1789ರಿಂದ 2025ರ ತನಕದ 202 ದೇಶಗಳನ್ನು ಒಳಗೊಂಡಂತೆ ಜಾಗತಿಕವಾಗಿ 4,200ಕ್ಕೂ ಹೆಚ್ಚಿನ ವಿದ್ವಾಂಸರು ಪ್ರಜಾಪ್ರಭುತ್ವದ 600ಕ್ಕೂ ಹೆಚ್ಚಿನ ಗುಣಲಕ್ಷಣಗಳನ್ನು ಅಳೆಯಲಾಗುತ್ತದೆ. ಇಂತಹ ಹಿನ್ನೆಲೆಯ ವಿ-ಡೆಮ್ ಸಂಸ್ಥೆ ಬಿಡುಗಡೆಮಾಡಿದ 2026ರ ಪ್ರಜಾಪ್ರಭುತ್ವದ ವರದಿಯು ಹಲವು ಕಾರಣಗಳಿಗೆ ಮುಖ್ಯವಾಗಿದೆ. 52 ಪುಟದ ಈ ವರದಿಯು ಜಗತ್ತಿನ ಪ್ರಜಾಪ್ರಭುತ್ವದ ಬಿಕ್ಕಟ್ಟನ್ನು ಎಳೆಎಳೆಯಾಗಿ ತೆರೆದಿಟ್ಟಿದೆ. ಪ್ರಜಾಪ್ರಭುತ್ವ ಯುಗ ಕೊನೆಗೊಳ್ಳುತ್ತಿದೆಯೇ? ಎನ್ನುವ ಪ್ರಶ್ನೆಯನ್ನು ಹಾಕಿಕೊಂಡು ಚಾರಿತ್ರಿಕ ಹೋರಾಟಗಳಿಂದ ನೇಯ್ದ ಪ್ರಜಾಪ್ರಭುತ್ವದ ಬಟ್ಟೆಯೊಂದು ಹೇಗೆ ಎಳೆ ಎಳೆ ಬಿಚ್ಚಿಕೊಳ್ಳುತ್ತಾ ಸಡಿಲಗೊಳ್ಳುತ್ತಿದೆ ಎನ್ನುವುದನ್ನು ವಿವರಿಸುತ್ತಾ ಹೋಗುತ್ತದೆ.

ವಿಶ್ವದ ಜನಸಂಖ್ಯೆಯ ಸುಮಾರು ಮುಕ್ಕಾಲು ಭಾಗ ಶೇ 74ರಷ್ಟು ಆರು ಬಿಲಿಯನ್ ಜನರು ನಿರಂಕುಶ (ಸರ್ವಾಧಿಕಾರಿ) ಪ್ರಭುತ್ವದಡಿ ವಾಸಿಸುತ್ತಿದ್ದಾರೆ. ಅಂದರೆ ಜಗತ್ತಿನ ಪ್ರತಿ ನಾಲ್ಕು ಜನರಲ್ಲಿ ಮೂವರು ನಿರಂಕುಶ ಪ್ರಭುತ್ವದಡಿ ಬದುಕುತ್ತಿದ್ದಾರೆ. ಶೇಕಡ 28ರಷ್ಟು ಅರೆ ಸರ್ವಾಧಿಕಾರಿ ದೇಶಗಳಲ್ಲಿದ್ದಾರೆ. ಶೇ 7ರಷ್ಟು ಜನರು ಮಾತ್ರ ಉದಾರವಾದಿ ಪ್ರಜಾಪ್ರಭುತ್ವದಡಿಯಲ್ಲಿದ್ದಾರೆ. 2025ರ ಅಂತ್ಯದ ವೇಳೆಗೆ ಪ್ರಪಂಚದಲ್ಲಿ 92 ಸಂಪೂರ್ಣ ಸರ್ವಾಧಿಕಾರಿ ದೇಶಗಳಾಗಿ ರೂಪಾಂತರಗೊಳ್ಳುತ್ತಿವೆ. 87 ಚುನಾಯಿತ ಸರ್ವಾಧಿಕಾರವಿರುವ ಪ್ರಜಾಪ್ರಭುತ್ವ ದೇಶಗಳಿವೆ. 2025ರಲ್ಲಿ 10 ಹೊಸ ಸರ್ವಾಧಿಕಾರಿ ದೇಶಗಳನ್ನು ಗುರುತಿಸಲಾಗಿದೆ. ಸರ್ವಾಧಿಕಾರ ಇರುವ 33 ದೇಶಗಳಲ್ಲಿ ಶೇ 73ರಷ್ಟು ಮಾಧ್ಯಮಗಳು ಸರಕಾರಗಳ ಕಣ್ಗಾವಲಿನಲ್ಲಿ ನಿಯಂತ್ರಣಕ್ಕೊಳಪಟ್ಟಿವೆ. 30 ಸರ್ವಾಧಿಕಾರಿ ದೇಶಗಳಲ್ಲಿ ನಾಗರಿಕ ಸಮಾಜದ ಮೇಲಿನ ದಮನಕಾರಿ ನಡವಳಿಕೆಗಳು ಶೇ 68ರಷ್ಟು ಹೆಚ್ಚಾಗಿದೆ. 2025ರಲ್ಲಿ 33 ದೇಶಗಳು ರಾಜಕೀಯ ವಿರೋಧವನ್ನು ಹತ್ತಿಕ್ಕಲು ಚಿತ್ರಹಿಂಸೆ ಕೊಡುವ ಪ್ರಮಾಣವನ್ನು ಹೆಚ್ಚಿಸಿವೆ. ಕಳೆದ 25 ವರ್ಷಗಳಲ್ಲಿ ಪ್ರಜಾಪ್ರಭುತ್ವವನ್ನು ಅಳೆಯಬಹುದಾದ ಎಲ್ಲಾ ಸಂಗತಿಗಳ ಕ್ರಮಾಂಕದಲ್ಲಿ ತೀವ್ರವಾದ ಕುಸಿತ ಕಂಡಿವೆ. ಸದ್ಯಕ್ಕೆ ನಡೆಯುತ್ತಿರುವ ಸರ್ವಾಧಿಕಾರ ಬಲಗೊಳ್ಳುತ್ತಿರುವ ಮೂರನೆ ಅಲೆಯಲ್ಲಿ ಚಾರಿತ್ರಿಕವಾಗಿ ಇಷ್ಟು ವೇಗದಲ್ಲಿ ಬೆಳೆಯುತ್ತಿರುವ ಸರ್ವಾಧಿಕಾರಿ ದೇಶಗಳನ್ನು ಜಗತ್ತು ಈವರೆಗೂ ಕಂಡಿರಲಿಲ್ಲ.

Printed and Published by: SUNDAR and Owned by: SUNDAR Printed at: SHILPA PUBLICATIONS AND PRINTING PRESS, No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Published at: No. 5-122/2,Ward No.20, Vidya Nagara Colony, Sirwar-584129, Raichur Dist, Karnataka. Editor: SUNDAR